# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಮಂಗಳವಾರ, ಫೆಬ್ರವರಿ 07, 2023

ಸಂಪುಟ : 49 ಸಂಚಿಕೆ : 266 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




## ಹತ್ತು ದಿನ ಮತದಾನ ಪ್ರಾತ್ಯಕ್ಷಿಕೆ

**ಉತ್ತರ-ದಕ್ಷಿಣ ವಿಧಾನಸಭಾ ಕ್ಷೇತ್ರದ 454 ಕೇಂದ್ರಗಳಲ್ಲಿ ಮತದಾನ ಪ್ರಾತ್ಯಕ್ಷಿಕೆ**

ದಾವಣಗೆರೆ, ಫೆ.6- ಮುಂಬರುವ ವಿಧಾನ ಸಭಾ ಚುನಾವಣೆಯಲ್ಲ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅನುಕೂಲವಾಗುವ ದೃಷ್ಟಿಯಿಂದ ಮಹಾನಗರ ಪಾಲಿಕೆ ಕಚೇರಿ ಬಲಭಾಗದಲ್ಲಿರುವ ನೌಕರರ ಸಭಾಂಗಣದ ಕಟ್ಟಡದಲ್ಲಿ ವಿದ್ಯುನ್ಮಾನ ಮತ ಯಂತ್ರ ಮತದಾನ ಪ್ರಾತ್ಯಕ್ಷಿಕೆ ಆರಂಭಿಸಲಾಗಿದ್ದು, ಸೋಮವಾರದಿಂದ ಹತ್ತು ದಿನಗಳ ಕಾಲ ಪ್ರತಿ ದಿನ ಬೆಳಿಗ್ಗೆ 10.30ರಿಂದ ಸಂಜೆ 5.30ರವರೆಗೆ ಈ ಪ್ರಾತ್ಯಕ್ಷಿಕೆ ನಡೆಯಲಿದೆ.

ಇಂದು ಸಂಜೆ ಮಾಧ್ಯಮದವರಿಗೆ ಪ್ರಾತ್ಯಕ್ಷಿಕೆ ನಡೆಸಿಕೊಟ್ಟ ಮಹಾನಗರ ಪಾಲಿಕೆ ಆಯುಕ್ತರಾದ ರೇಣುಕಾ, ಚುನಾವಣಾ ಆಯೋಗದ ಮಾರ್ಗಸೂಚಿಯಂತೆ ದಾವಣಗೆರೆ ಉತ್ತರ ಹಾಗೂ ದಾವಣಗೆರೆ ದಕ್ಷಿಣ ಮತ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮಾಧ್ಯಮದವರು, ರಾಜಕೀಯ ಮುಖಂಡರು, ವಿವಿಧ ಸಂಘ-ಸಂಸ್ಥೆಗಳು ಹಾಗೂ ಸಾರ್ವಜನಿಕರಿಗಾಗಿ ಮಾದರಿ ಮತಗಟ್ಟೆ ಕೇಂದ್ರಗಳನ್ನು ರಚಿಸಿ, ವಿದ್ಯುನ್ಮಾನ ಮತ ಯಂತ್ರ ಪ್ರಾತ್ಯಕ್ಷಿಕೆ ನೀಡಲಾಗುವುದು ಎಂದು ಹೇಳಿದರು.

ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ 136 ಸ್ಥಳಗಳಲ್ಲಿ 212 ಮತಗಟ್ಟೆ ಕೇಂದ್ರ ಹಾಗೂ ಉತ್ತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 123 ಸ್ಥಳಗಳಲ್ಲಿ 242 ಮತಗಟ್ಟೆ ಕೇಂದ್ರಗಳನ್ನು ಸ್ಥಾಪಿಸಿ, ಮತದಾರರಿಗೆ ಪ್ರಾತ್ಯಕ್ಷಿಕೆ ಮೂಲಕ ಅರಿವು ಮೂಡಿಸುವ ಕಾರ್ಯ ಹಮ್ಮಿಕೊಳ್ಳಲಾಗಿದೆ. ಪ್ರತಿ ಕೇಂದ್ರದಲ್ಲಿ ದಿನಕ್ಕೆ ಕನಿಷ್ಟ 50 ಮತದಾರರಿಂದ ಅಣಕು ಮತದಾನ ಮಾಡಿಸುವ ಗುರಿ ಹೊಂದಲಾಗಿದೆ ಎಂದು ಹೇಳಿದರು.

> **ಪ್ರತಿಯೊಬ್ಬರಲ್ಲೂ ಮತದಾನದ ಅರಿವು ಮೂಡಿಸಿದಾಗ ಮತದಾನದ ಪ್ರಮಾಣ ಹೆಚ್ಚಾಗಲಿದೆ. ಈ ನಿಟ್ಟಿನಲ್ಲಿ ಚುನಾವಣಾ ಆಯೋಗದ ಸೂಚನೆಯಂತೆ ಪ್ರಾತ್ಯಕ್ಷಿಕೆ ನೀಡಿ ಅರಿವು ಮೂಡಿಸಲಾಗುತ್ತಿದೆ.**
> **- ರೇಣುಕಾ, ಪಾಲಿಕೆ ಆಯುಕ್ತರು.**

ಪ್ರತಿ ದಿನ ಅಣಕು ಮತದಾನ ಬಳಿಕ ಮತ ಯಂತ್ರಗಳನ್ನು ಚುನಾವಣಾ ಆಯೋಗದ ಮಾರ್ಗಸೂಚಿಯಂತೆ ಪಾಲಿಕೆ ಕಚೇರಿಯಲ್ಲಿಯೇ ನಿಗದಿಪಡಿಸಿರುವ ಮಾದರಿ ಭದ್ರತಾ ಕೊಠಡಿಯಲ್ಲಿಡಲಾಗುವುದು. ಭದ್ರತಾ ಕೊಠಡಿಗೂ ಪೊಲೀಸ್ ಭದ್ರತೆ ಒದಗಿಸಲಾಗುವುದು ಎಂದರು.

ಪ್ರಾತ್ಯಕ್ಷಿಕೆಗಾಗಿ ಅಗತ್ಯ ಡೆಮ್ಮಿ ಮತ ಯಂತ್ರ, ವಿವಿ ಪ್ಯಾಟ್‌ಗಳನ್ನು ಆಯೋಗ (2ನೇ ಪುಟಕ್ಕೆ)



### ಮಾಯಕೊಂಡ ವ್ಯಾಪ್ತಿಯಲ್ಲಿ ಪ್ರಾತ್ಯಕ್ಷಿಕೆ

**ದಾವಣಗೆರೆ, ಫೆ. 6 - ಇವಿಎಂ ಮೂಲಕ ಮತದಾನ ಮಾಡುವ ವಿಧಾನ ಕುರಿತು ಜಾಗೃತಿ ಮೂಡಿಸುವ ಪ್ರಾತ್ಯಕ್ಷಿಕೆ ಕಾರ್ಯಕ್ರಮಕ್ಕೆ ತಹಶೀಲ್ದಾರ್ ಕಚೇರಿಯಲ್ಲಿ ತಹಶೀಲ್ದಾರ್ ಎಂ.ಬಿ. ಅಶ್ವತ್ಥ್ ಚಾಲನೆ ನೀಡಿದರು. ಚುನಾವಣಾ ಆಯೋಗದ ಸೂಚನೆಯಂತೆ ಪ್ರಸ್ತುತ ಮಾಯಕೊಂಡ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಾರ್ಯಕ್ರಮ ನಡೆಸಲಾಗುತ್ತಿದೆ. ಇಂದು 23 ಸಿಬ್ಬಂದಿಯ ತಂಡ, 46 ಸ್ಥಳಗಳಲ್ಲಿ ಮತದಾನದ ಬಗ್ಗೆ ಜಾಗೃತಿ ನೀಡಲಿದೆ ಎಂದು ಅಶ್ವತ್ಥ ತಿಳಿಸಿದರು.**

# ಜೀವನ ಮಟ್ಟ ಸುಧಾರಣೆಗೆ ಸ್ಥಿರ ಸರ್ಕಾರ

## ಸ್ಥಿರ ಸರ್ಕಾರದಿಂದ ಗಟ್ಟಿ ನಿರ್ಧಾರ ಕೈಗೊಳ್ಳಲು ನಾಂದಿ: ಪ್ರಧಾನಿ ನರೇಂದ್ರ ಮೋದಿ

ಬೆಂಗಳೂರು, ಫೆ. 6 - ಜನರ ಜೀವನಮಟ್ಟ ಸುಧಾರಣೆಗೆ ಪೂರಕ ತೀರ್ಮಾನ ಕೈಗೊಳ್ಳಲು ಸ್ಥಿರ ಸರ್ಕಾರ ತನ್ನಿ ಎಂದು ರಾಜ್ಯದ ಜನತೆಗೆ ಪ್ರಧಾನಿ ನರೇಂದ್ರ ಮೋದಿ ಪರೋಕ್ಷವಾಗಿ ಕರೆ ನೀಡಿದ್ದಾರೆ.

ದೇಶದಲ್ಲಿ ಈಗ ಸ್ಥಿರವಾದ ಸರ್ಕಾರ ಇದೆ. ಗಟ್ಟಿಯಾದ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತಿದೆ. ಕೆಳಸ್ತರದ ಜನರ ಜೀವನ ಮಟ್ಟ ಸುಧಾರಣೆಗೆ ಪೂರಕವಾಗಿ ತೀರ್ಮಾನಗಳನ್ನು ಕೈಗೊಳ್ಳಲಾಗುತ್ತಿದೆ. ಹೀಗಾಗಿ ದೇಶವು ತ್ವರಿತವಾಗಿ ಅಭಿವೃದ್ಧಿ ಹೊಂದುತ್ತಿದೆ ಎಂದು ಹೇಳಿದ್ದಾರೆ.

ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಮೇಲಿಂದ ಮೇಲೆ ರಾಜ್ಯ ಪ್ರವಾಸ ಕೈಗೊಳ್ಳುತ್ತಿರುವ ಪ್ರಧಾನಿಯವರು, ಸೋಮವಾರ ಬೆಂಗಳೂರು ಹೊರ ವಲಯ ಮತ್ತು ತುಮಕೂರಿನ ಗುಬ್ಬಿಯಲ್ಲಿ ಕೇಂದ್ರ, ರಾಜ್ಯ ಸರ್ಕಾರದ ಕಾರ್ಯಕ್ರಮಗಳನ್ನು ಉದ್ಘಾಟಿಸಿ ಮಾತನಾಡಿ, ಸ್ಥಿರ ಸರ್ಕಾರ ಇದ್ದರೆ ಗಟ್ಟಿ ನಿರ್ಧಾರ ಕೈಗೊಳ್ಳಲು ನಾಂದಿಯಾಗುತ್ತದೆ ಎಂದರು.



ಕಳೆದ ಕೆಲವು ವರ್ಷಗಳಿಂದ ರಾಷ್ಟ್ರದಲ್ಲಿ ಸ್ಥಿರ ಸರ್ಕಾರ ಬೇರೂರಿದ್ದು, ಇದರಿಂದ ಕಠಿಣ ನಿರ್ಧಾರ ಕೈಗೊಳ್ಳಲು ಸಾಧ್ಯವಾಗಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಅಭಿವೃದ್ಧಿಗೆ ಪೂರಕವಾಗುವ ಹಲವು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದೇವೆ ಎಂದರು.

ಇತ್ತೀಚಿನ ವರ್ಷಗಳಲ್ಲಿ ಕೆಲವು ಮಹತ್ತರವಾದ ಬದಲಾವಣೆಗಳು ಕಂಡು ಬಂದಿರಲು ಸ್ಥಿರ ಸರ್ಕಾರವೇ ಕಾರಣ. ಸರ್ಕಾರದ ತೀರ್ಮಾನಗಳಿಂದ ಫಲಾನುಭವಿಗಳ ಸಂಖ್ಯೆಯು ಹಲವು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಜನಸಂಖ್ಯೆಗಿಂತಲೂ ಹೆಚ್ಚಿದೆ. ಇಂದು ದೇಶದಲ್ಲಿ ಕೋಟ್ಯಂತರ ಜನರ ಬದುಕಿನ ರೀತಿ ಬದಲಾಗಿದೆ ಎಂದು ಹೇಳಿದರು.

ಹಳ್ಳಿ ಹಳ್ಳಿಗಳಲ್ಲಿ ಇಂಟರ್‌ನೆಟ್ ತಲುಪಿದೆ. ಇದಕ್ಕಾಗಿ ಐದು ಲಕ್ಷ (2ನೇ ಪುಟಕ್ಕೆ)

### 11 ರಾಜ್ಯಗಳಲ್ಲಿ ಶೇ.20ರ ಎಥೆನಾಲ್ ಬೆರಕೆ ಆರಂಭ

ಬೆಂಗಳೂರು, ಫೆ. 6 – ದೇಶದ 11 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಪೆಟ್ರೋಲ್‌ನಲ್ಲಿ ಶೇ.20ರಷ್ಟು ಎಥೆನಾಲ್ ಮಿಶ್ರಣ ಮಾಡುವುದಕ್ಕೆ ಚಾಲನೆ ನೀಡಲಾಗಿದೆ. ಈ ಯೋಜನೆಯಿಂದ ಜೈವಿಕ ಇಂಧನದ ಬಳಕೆ ಹೆಚ್ಚಾಗುವ ಜೊತೆಗೆ ಮಾಲಿನ್ಯವೂ ಕಡಿಮೆಯಾಗುತ್ತದೆ. ವಿದೇಶಿ ವಿನಿಮಯದ ಮೇಲಿನ ಹೊರೆ ಇಳಿಕೆಯಾಗಲಿದೆ.

ಪ್ರಸಕ್ತ ಪೆಟ್ರೋಲ್‌ನಲ್ಲಿ ಶೇ.10ರಷ್ಟು ಎಥೆನಾಲ್ ಬೆರೆಸಲಾಗುತ್ತಿದೆ. 2025ರ ವೇಳೆಗೆ ಇದನ್ನು ಎರಡು ಪಟ್ಟು ಹೆಚ್ಚಿಸಲು ಕೇಂದ್ರ ಸರ್ಕಾರ ಯೋಜಿಸಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, ಶೇ.20 ಎಥೆನಾಲ್ ಬೆರಕೆ ಯೋಜನೆಗೆ ಇಂಧನ ಸಪ್ತಾಹ ಕಾರ್ಯಕ್ರಮದಲ್ಲಿ ಚಾಲನೆ (2ನೇ ಪುಟಕ್ಕೆ)

# ಹರಿಹರದಲ್ಲಿ ಕಾಂಗ್ರೆಸ್ ಅಡಿಪಾಯ ಭದ್ರ

**ಎ.ಐ.ಸಿ.ಸಿ. ಚುನಾವಣಾ ವೀಕ್ಷಕಿ ಪ್ರಣತಿ ಶಿಂಧೆ**

ಹರಿಹರ, ಫೆ. 6 - ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ನಡೆದ ಭಾರತ್ ಜೋಡೋ ಯಾತ್ರೆ ಯಶಸ್ವಿಯಾಗಿದೆ. ಇದರಿಂದ ಕಾಂಗ್ರೆಸ್ ಪಕ್ಷ ಮತ್ತಷ್ಟು ಬಲವಾಗಿದೆ ಎಂದು ಎ.ಐ.ಸಿ.ಸಿ.ಯ ಚುನಾವಣಾ ವೀಕ್ಷಕಿ ಪ್ರಣತಿ ಶಿಂಧೆ ತಿಳಿಸಿದರು.

ಚುನಾವಣೆ ಹಿನ್ನೆಲೆಯಲ್ಲಿ ನಗರದ ರಚನಾ ಕ್ರೀಡಾ ಟ್ರಸ್ಟ್ ಸಭಾಂಗಣದಲ್ಲಿ ನಡೆಸಲಾದ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಅವರು ಮಾತನಾಡಿದರು.

ಹರಿಹರದಲ್ಲಿ ಕಾಂಗ್ರೆಸ್ ಅಡಿಪಾಯ ಬಲಿಷ್ಠ ವಾಗಿದೆ. ಕಾಂಗ್ರೆಸ್ ಅಧಿಕಾರಕ್ಕೆ ತರುವ ಆತ್ಮವಿಶ್ವಾಸ ಇರಬೇಕು. ಮುಖಂಡರು ಗೊಂದಲ ಮಾಡಿ ಕೊಂಡರೆ ಪಕ್ಷಕ್ಕೆ ಹಿನ್ನಡೆಯಾಗುತ್ತದೆ ಎಂದವರು ಹೇಳಿದರು.

ಚುನಾವಣೆ ಹತ್ತಿರದಲ್ಲೇ ಇದೆ. ಆಡಳಿತಾರೂಢ ಸರ್ಕಾರಗಳು ಮಾಡಿರುವ ತೊಂದರೆಗಳ ಬಗ್ಗೆ ಜನರಿಗೆ ತಿಳಿಸಬೇಕು. ಹರಿಹರ ತಾಲ್ಲೂಕಿನಲ್ಲಿ ಕೃಷಿ ಹಾಗೂ ಕೈಗಾರಿಕೆಗಳಿಗೆ ಆಗಿರುವ ಹಿನ್ನಡೆ ಬಗ್ಗೆ ತಿಳಿಸಬೇಕು. ಪಕ್ಷ ಯಾರಿಗೇ ಟಿಕೆಟ್ ನೀಡಿದರೂ ಆ ಅಭ್ಯರ್ಥಿಯನ್ನು ಗೆಲ್ಲಿಸಬೇಕು ಎಂದು ಕರೆ ನೀಡಿದರು.

ಶಾಸಕ ಎಸ್. (2ನೇ ಪುಟಕ್ಕೆ)



### ಸಭೆಯಲ್ಲಿ ಮಾತಿನ ಚಕಮಕಿ



ಹರಿಹರ, ಫೆ. 6- ಚುನಾವಣೆ ಹಿನ್ನೆಲೆಯಲ್ಲಿ ನಗರದ ರಚನಾ ಕ್ರೀಡಾ ಟ್ರಸ್ಟ್ ಸಭಾಂಗಣದಲ್ಲಿ ನಡೆಸಲಾದ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಎ.ಐ.ಸಿ.ಸಿ. ವೀಕ್ಷಕರ ಎದುರೇ ಮಾತಿನ ಚಕಮಕಿ ನಡೆದಿದೆ.

ಎ.ಐ.ಸಿ.ಸಿ. ವೀಕ್ಷಕಿ ಪ್ರಣತಿ ಶಿಂಧೆ ಅವರು ಉಪಸ್ಥಿತರಿದ್ದ ಸಭೆಯಲ್ಲಿ ಮಲೇಬೆನ್ನೂರಿನ ಮುಖಂಡ ಸೈಯದ್ ಜಾಕೀರ್ ಎಂಬುವವರು ಮಾತನಾಡಲು ಅವಕಾಶ ಕೇಳಿದರು. ಆದರೆ, ವೀಕ್ಷಕರು ಹೊನ್ನಾಳಿ ನಗರಕ್ಕೆ ತೆರಳಬೇಕಿರುವುದರಿಂದ ಶಾಸಕ ಎಸ್. ರಾಮಪ್ಪ ಅವರಿಗೆ ಮಾತ್ರ ಅವಕಾಶ ನೀಡಲಾಗುವುದು ಎಂದು ತಿಳಿಸಲಾಯಿತು. ಪಕ್ಷದ ಸಮಸ್ಯೆಗಳನ್ನು ಸರಿಪಡಿಸುವ ಬಗ್ಗೆ ಮಾತನಾಡಬೇಕಿತ್ತು. ಅವಕಾಶ ನೀಡದೇ ಇದ್ದರೆ ಯಾಕೆ (2ನೇ ಪುಟಕ್ಕೆ)

### ಜಿಲ್ಲೆಯಲ್ಲಿ 6 ಲಕ್ಷ ರೂ. ದಂಡ ಪಾವತಿಸಿದ ಜನತೆ

**ಸಂಚಾರಿ ನಿಯಮ ಉಲ್ಲಂಘನೆ ದಂಡಕ್ಕೆ ಶೇ.50ರಷ್ಟು ರಿಯಾಯಿತಿ ಹಿನ್ನೆಲೆ**

ದಾವಣಗೆರೆ, ಫೆ.6- ಸಂಚಾರಿ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಸಂಚಾರಿ ಇ-ಚಲನ್ ಮೂಲಕ ವಿಧಿಸಿದ ದಂಡದ ಮೊತ್ತದಲ್ಲಿ ಶೇ.50 ರಷ್ಟು ರಿಯಾಯಿತಿಯಲ್ಲಿ ದಂಡದ ಮೊತ್ತವನ್ನು ಪಾವತಿಸುವ ಆದೇಶದ ಅವಕಾಶ ಸದುಪಯೋಗ ಜಿಲ್ಲಾ ಜನತೆ, 2400 ಸಂಚಾರಿ ಇ-ಚಲನ್ ಪ್ರಕರಣಗಳಿಗೆ ಸಂಬಧಿಸಿದಂತೆ ಸುಮಾರು 6 ಲಕ್ಷಕ್ಕೂ ಹೆಚ್ಚು ದಂಡವನ್ನು ಪಾವತಿಸಿದ್ದಾರೆ.

ಸಂಚಾರಿ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಸಂಚಾರಿ ಇ-ಚಲನ್ ಮೂಲಕ ವಿಧಿಸಿದ ದಂಡದ ಮೊತ್ತಕ್ಕೆ ಶೇ.50ರಷ್ಟು ರಿಯಾಯಿತಿ ಇದ್ದು, ಫೆ.11ರವರೆಗೆ ಮಾತ್ರ ಅವಕಾಶವಿರುತ್ತದೆ. ಸಾರ್ವಜನಿಕರು ಹತ್ತಿರದ ದಾವಣಗೆರೆ ನಗರದ ಉತ್ತರ ಅಥವಾ ದಕ್ಷಿಣ ಸಂಚಾರಿ ಪೊಲೀಸ್ ಠಾಣೆಗಳಲ್ಲಿ ಮತ್ತು ನಗರದಲ್ಲಿ ವಿವಿಧ ಕಡೆ ಸ್ಥಾಪಿಸಲಾಗಿರುವ ಸಂಚಾರಿ ಇ-ಚಲನ್ ಪಾವತಿ ಸ್ಥಳ, ಕರ್ನಾಟಕ ಒನ್ ಜಾಲತಾಣ, ದಾವಣಗೆರೆ ಒನ್ ಮೂಲಕ ಹಾಗೂ ಜಗಳೂರು, ಚನ್ನಗಿರಿ, ಹರಿಹರ, ಹೊನ್ನಾಳಿ, ದಾವಣಗೆರೆ ಗ್ರಾಮಾಂತರ (2ನೇ ಪುಟಕ್ಕೆ)

### ಮುಂದಿನ ತರಳಬಾಳು ಹುಣ್ಣಿಮೆ ಭರಮಸಾಗರದಲ್ಲಿ

ಕೊಟ್ಟೂರು, ಫೆ. 6 - ಮುಂದಿನ 2024ರ ತರಳಬಾಳು ಹುಣ್ಣಿಮೆ ಮಹೋತ್ಸವ ಚಿತ್ರದುರ್ಗ ಜಿಲ್ಲೆಯ ಭರಮಸಾಗರದಲ್ಲಿ ನೆರವೇರಲಿದೆ.

ಕೊಟ್ಟೂರಿನಲ್ಲಿ ನಡೆದ ತರಳಬಾಳು ಹುಣ್ಣಿಮೆಯ ಕೊನೆಯ ದಿನದ ಸಮಾರಂಭದಲ್ಲಿ ಈ ವಿಷಯ ತಿಳಿಸಿದ ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಸಿರಿಗೆರೆಗೆ ಸಮೀಪದ ಭರಮಸಾಗರದಲ್ಲಿ ಮುಂದಿನ ಹುಣ್ಣಿಮೆ ನೆರವೇರಲಿದೆ ಎಂದರು. ಭರಮಸಾಗರ ಸೇರಿದಂತೆ ಚಿತ್ರದುರ್ಗ ಭಾಗದ ಕೆರೆಗಳಿಗೆ ನೀರು ತುಂಬಿಸುವ ಏತ ನೀರಾವರಿ ಯೋಜನೆ ಜಾರಿಗೊಳಿಸುವಲ್ಲಿ ತರಳಬಾಳು ಜಗದ್ಗುರುಗಳು ಮಹತ್ವದ ಪಾತ್ರ ವಹಿಸಿದ್ದರು.

### ಅದಾನಿ ಚರ್ಚೆಗೆ ವಿಪಕ್ಷಗಳ ಪಟ್ಟು, ಮತ್ತೆ ಕಲಾಪ ಭಂಗ

ನವದೆಹಲಿ, ಫೆ. 6 – ಅದಾನಿ ಸಮೂಹದ ವಿರುದ್ಧ ಕೇಳಿ ಬಂದಿರುವ ವಂಚನೆ ಆರೋಪಗಳ ಬಗ್ಗೆ ಜೆ.ಪಿ.ಸಿ. ತನಿಖೆ ನಡೆಸುವಂತೆ ಪ್ರತಿಪಕ್ಷಗಳು ಒತ್ತಾಯಿಸಿ, ಸಂಸತ್ತಿನಲ್ಲಿ ಗದ್ದಲ ನಡೆಸಿವೆ. ಇದರಿಂದಾಗಿ ಕಲಾಪವನ್ನು ಮುಂದೂಡಲಾಗಿದೆ. ಖಾಸಗಿ ಸಂಸ್ಥೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಸದನದಲ್ಲಿ ಚರ್ಚಿಸಲಾಗದು ಎಂದು ಬಿಜೆಪಿ ಹೇಳುತ್ತಿದೆ.

### ಮುಟ್ಟಿನ ರಜೆ ನೀಡುವ ಪ್ರಸ್ತಾಪ ಇಲ್ಲ : ಕೇಂದ್ರ

ನವದೆಹಲಿ, ಫೆ. 6- ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯರಿಗೆ ಮುಟ್ಟಿನ ರಜೆ ನೀಡುವ ಯಾವುದೇ ಪ್ರಸ್ತಾವನೆ ಇಲ್ಲ ಎಂದು ಕೇಂದ್ರ ಶಿಕ್ಷಣ ಸಚಿವಾಲಯ ತಿಳಿಸಿದೆ. ಲೋಕಸಭೆಯಲ್ಲಿ ಈ ಕುರಿತು ಕೇಳಲಾದ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಶಿಕ್ಷಣ ಖಾತೆ ಅಧೀನ ಸಚಿವ ಸುಭಾಷ್ ಸರ್ಕಾರ್, ರಜೆ ನೀಡುವ ಸಲುವಾಗಿ ಶಾಸನ ರೂಪಿಸುವ ಯಾವುದೇ ಪ್ರಸ್ತಾಪ ಸರ್ಕಾರದ ಎದುರಿಲ್ಲ ಎಂದಿದ್ದಾರೆ.

# ಇದೀಗ 'ಡಯಾಲಿಸಿಸ್' ಚಿಕಿತ್ಸೆ ಸಂಪೂರ್ಣ ಉಚಿತ: ಎಸ್ಸೆಸ್



ದಾವಣಗೆರೆ, ಫೆ. 6- ಇನ್ನು ಮುಂದೆ ಬಡ ಜನರ ಅನುಕೂಲಕ್ಕಾಗಿ 'ಡಯಾಲಿಸಿಸ್' ಚಿಕಿತ್ಸೆಯನ್ನು ಸಂಪೂರ್ಣಉಚಿತವಾಗಿ ನೀಡಲಾಗುವುದು ಎಂದು ಎಸ್.ಎಸ್. ಕೇರ್ ಟ್ರಸ್ಟ್ ಅಧ್ಯಕ್ಷರೂ, ಶಾಸಕರೂ ಆದ ಡಾ. ಶಾಮನೂರು ಶಿವಶಂಕರಪ್ಪ ಹೇಳಿದರು.

ನಗರದ ಕೆ.ಆರ್. ರಸ್ತೆ ಜಗಳೂರು ಬಸ್ ನಿಲ್ದಾಣದ ಹತ್ತಿರದ ಎಸ್.ಎಸ್. ಸಾರ್ವಜನಿಕ ಆಸ್ಪತ್ರೆಯಲ್ಲಿ ಎಸ್.ಎಸ್. ಕೇರ್ ಟ್ರಸ್ಟ್ ವತಿಯಿಂದ ಹೆಚ್ಚುವರಿಯಾಗಿ ನಾಲ್ಕು ಡಯಾಲಿಸಿಸ್ ಘಟಕಗಳ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಎಸ್. ಎಸ್. ಕೇರ್ ಟ್ರಸ್ಟ್ ವತಿಯಿಂದ ಬ್ಯಾಂಕ್‌ನಲ್ಲಿ 10 ಕೋಟಿ ರೂ. ಠೇವಣಿ ಇರಿಸಿದ್ದು, ಇದರಿಂದ ಬರುವ ಬಡ್ಡಿ ಹಣದಲ್ಲಿ ಡಯಾಲಿಸಿಸ್ ಚಿಕಿತ್ಸೆಯನ್ನು ಸಂಪೂರ್ಣ ಉಚಿತವಾಗಿ ನೀಡುವುದಾಗಿ ಘೋಷಿಸಿದರು.

ಎಸ್.ಎಸ್. ಕೇರ್ ಟ್ರಸ್ಟ್ ವತಿಯಿಂದ ವಿವಿಧ ಕಾಯಿಲೆಗಳಿಗೂ ಚಿಕಿತ್ಸೆ ನೀಡಲಾಗುತ್ತದೆ. ಈ ಭಾಗದ ಬಡ ಜನರು ಇದರ ಉಪಯೋಗ ಪಡೆದುಕೊಂಡು ಆರೋಗ್ಯಕರ ಜೀವನ ನಡೆಸಲು ಕರೆ ನೀಡಿದರು.

2021 ರಲ್ಲಿ 4 ಡಯಾಲಿಸಿಸ್ ಘಟಕಗಳನ್ನು ಈ ಆಸ್ಪತ್ರೆ ಹೊಂದಿತ್ತು. 2022 ರಲ್ಲಿ ಮತ್ತೆ 4 ಯಂತ್ರಗಳನ್ನು ಅಳವಡಿಸಲಾಯಿತು. ಇದೀಗ ಜನರ ಒತ್ತಾಸೆಯಂತೆ ಮತ್ತೆ ಹೆಚ್ಚುವರಿಯಾಗಿ 4 ಡಯಾಲಿಸಿಸ್ ಘಟಕಗಳಿಗೆ ಇಂದು ಚಾಲನೆ ನೀಡಲಾಗಿದೆ ಎಂದರು.

ಪ್ರಸ್ತುತ ಈ ಆಸ್ಪತ್ರೆ 12 ಡಯಾಲಿಸಿಸ್ ಘಟಕಗಳನ್ನು ಹೊಂದಿದೆ. ನೋಂದಾಯಿತ ರೋಗಿಗಳಿಗೆ ಉಚಿತವಾಗಿ ಡಯಾಲಿಸಿಸ್ ಮಾಡಲಾಗುವುದು. 5025 ಬಾರಿ ಡಯಾಲಿಸಿಸ್ ಸೇವೆಗಳನ್ನು ಒದಗಿಸಿದ್ದೇವೆ. ಈ ಭಾಗದ ನಾಗರಿಕರಿಗೆ ಅನುಕೂಲವಾಗಲೆಂದು ಹೊರರೋಗಿಗಳ ಚಿಕಿತ್ಸಾ ವಿಭಾಗ (ಓಪಿಡಿ) ಆರಂಭಿಸಲಾಗುವುದು ಎಂದು ಹೇಳಿದರು.

ಈ ಭಾಗದಲ್ಲಿ ಡಯಾಲಿಸಿಸ್ ಕೇಂದ್ರ ಸ್ಥಾಪಿಸಿರುವುದರಿಂದ ಅನೇಕರಿಗೆ ಅನುಕೂಲವಾಗಿದ್ದು, ಇದೀಗ ಸಂಪೂರ್ಣ ಉಚಿತ ಚಿಕಿತ್ಸೆ ನೀಡಲು ಸೂಚಿಸಿರುವ ಡಾ. ಶಾಮನೂರು ಶಿವಶಂಕರಪ್ಪ ಅವರ ಕಾರ್ಯ ಶ್ಲಾಘನೀಯ ಎಂದು ಡಯಾಲಿಸಿಸ್ ಚಿಕಿತ್ಸೆ ಪಡೆಯುತ್ತಿರುವ ಮುನ್ನಾ ಪೈಲ್ವಾನ್, ತಿಮ್ಮರಾಯಶೆಟ್ಟಿ, ಸುರೇಶ್ ಮತ್ತಿತರರು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಜ.ಜ.ಮು (2ನೇ ಪುಟಕ್ಕೆ)

### ವಾಟ್ಸ್‌ಆಪ್ ಚಾಟ್‌ಬಾಟ್ ಮೂಲಕ ರೈಲಿನಲ್ಲಿ ಆಹಾರ

ನವದೆಹಲಿ, ಫೆ. 6- ರೈಲ್ವೆ ಪ್ರಯಾಣಿಕರು ವಾಟ್ಸ್‌ಆಪ್ ಮೂಲಕ ತಮಗೆ ಬೇಕಾದ ಆಹಾರ ಪಡೆಯಲು ಶೀಘ್ರದಲ್ಲೇ ಅವಕಾಶ ಕಲ್ಪಿಸಲಾಗುವುದು. ಇದಕ್ಕಾಗಿ ಕೃತಕ ಬುದ್ಧಿವಂತಿಕೆ ಆಧರಿತ ಚಾಟ್‌ಬಾಟ್‌ಗಳನ್ನು ಬಳಸಿಕೊಳ್ಳಲಾಗುವುದು.

ಐ.ಆರ್.ಸಿ.ಟಿ.ಸಿ. ಈಗಾಗಲೇ ವಾಟ್ಸ್‌ಆಪ್ ಸಂಖ್ಯೆಯಾದ 8750001323 ಮೂಲಕ ಆಯ್ದ ಮಾರ್ಗಗಳಲ್ಲಿ ಆಹಾರ ಒದಗಿಸುತ್ತಿದೆ. ಗ್ರಾಹಕರ ಸಲಹೆಗಳನ್ನು ಆಧರಿಸಿ ಆಯ್ದ ಮಾರ್ಗಗಳಲ್ಲಿ ವಾಟ್ಸ್‌ಆಪ್ ಮೂಲಕ ಇ-ಕ್ಯಾಟರಿಂಗ್ ಸೇವೆ ಒದಗಿಸಲಾಗುತ್ತಿದೆ. ಬೇರೆ (2ನೇ ಪುಟಕ್ಕೆ)

### ಐದು ಪರೀಕ್ಷಾ ಪೇ ಚರ್ಚಾಗಳಿಗೆ 28 ಕೋಟಿ ರೂ. ವೆಚ್ಚ

ನವದೆಹಲಿ, ಫೆ. 6 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ವಿದ್ಯಾರ್ಥಿಗಳ ಜೊತೆ ನಡೆಸಿದ ಪರೀಕ್ಷಾ ಪೇ ಚರ್ಚಾ ಕಾರ್ಯಕ್ರಮದ ಐದು ಆವೃತ್ತಿಗಳಿಗೆ 28 ಕೋಟಿ ರೂ. ಖರ್ಚು ಮಾಡಲಾಗಿದೆ. ಈ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಅವರು ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರ ಜೊತೆ ಸಂವಾದ ನಡೆಸಿದ್ದರು. ಈ ಕಾರ್ಯಕ್ರಮದ ಆರನೇ ಆವೃತ್ತಿ ಕಳೆದ ಜನವರಿ 27ರಂದು ದೆಹಲಿ ಟಾಲ್ಕಟೋರಾ ಕ್ರೀಡಾಂಗಣದಲ್ಲಿ ನಡೆದಿತ್ತು. ಲೋಕಸಭೆಯಲ್ಲಿ ಕೇಳಲಾದ ಪ್ರಶ್ನೆಗೆ ಮಾಹಿತಿ ನೀಡಿರುವ ಕೇಂದ್ರ ಶಿಕ್ಷಣ ಖಾತೆ ಅಧೀನ ಸಚಿವೆ ಅನ್ನಪೂರ್ಣ ದೇವಿ, 2018ರಲ್ಲಿ ಮೊದಲ ಆವೃತ್ತಿಯಲ್ಲಿ 3.67 ಕೋಟಿ ರೂ., 2019ರಲ್ಲಿ 4.93 ಕೋಟಿ ರೂ., 2020ರಲ್ಲಿ 5.69 ಕೋಟಿ ರೂ., 2021ರಲ್ಲಿ 6 ಕೋಟಿ ರೂ. ಹಾಗೂ 2022ರಲ್ಲಿ 8.61 ಕೋಟಿ ರೂ. ವೆಚ್ಚವಾಗಿದೆ ಎಂದರು.

# ಬಡವರ ಹಣ ದೋಚ ಹೊರಟ ಕೇಂದ್ರ

## ಎಲ್‌ಐಸಿ ಕಚೇರಿ ಮುಂಭಾಗ ಜಿಲ್ಲಾ ಕಾಂಗ್ರೆಸ್‌ನಿಂದ ಪ್ರತಿಭಟನೆ

ದಾವಣಗೆರೆ, ಫೆ.6-ಭಾರತೀಯ ಜೀವ ವಿಮಾ ನಿಗಮವನ್ನು ಅದಾನಿ ಗ್ರೂಪ್‌ಗೆ ಮಾರಾಟ ಮಾಡಿ, ಷೇರು ಮಾರುಕಟ್ಟೆಯಲ್ಲಿ ಮನ ಬಂದಂತೆ ಏರಿಳಿತ ಮಾಡಿಸುವ ದಂಧೆಯಲ್ಲಿ ಬಿಜೆಪಿ ತೊಡಗಿಸಿಕೊಂಡಿದೆ ಎಂದು ಆರೋಪಿಸಿ, ಜಿಲ್ಲಾ ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಶಾಂತಿ ಟಾಕೀಸ್ ರಸ್ತೆಯಲ್ಲಿರುವ ಎಲ್.ಐ.ಸಿ. ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಮುಖಂಡರು, ಬಡವರ ಹಣ ನುಂಗಿದ ಅದಾನಿಗೆ ಧಿಕ್ಕಾರ, ಮೋದಿಗೆ ಧಿಕ್ಕಾರ, ಬಿಜೆಪಿ ಪಕ್ಷಕ್ಕೆ ಧಿಕ್ಕಾರ ಎಂದು ಘೋಷಣೆ ಕೂಗಿದರು.

ಎಲ್‌ಐಸಿ ಹಾಗೂ ಎಸ್‌ಬಿಐನಲ್ಲಿ ಹೂಡಿಕೆ ಮಾಡಿರುವ ಸಾಮಾನ್ಯ ಜನರ ಹಣ ಅಪಾಯದಲ್ಲಿದೆ. ಕೇಂದ್ರ ಸರ್ಕಾರ ಬಡವರ ಹಣ ದೋಚಲು (2ನೇ ಪುಟಕ್ಕೆ)



# ಚಿಕ್ಕಹಾಲಿವಾಣದಲ್ಲಿ ಶ್ರೀ ವೀರಭದ್ರೇಶ್ವರ ಸ್ವಾಮಿ ಗುಗ್ಗುಳ



ಹೊನ್ನಾಳಿ, ಫೆ.6- ತಾಲ್ಲೂಕಿನ ಚಿಕ್ಕಹಾಲಿವಾಣ ಗ್ರಾಮದ ಶ್ರೀ ವೀರಭದ್ರೇಶ್ವರ ಸ್ವಾಮಿ ಗುಗ್ಗುಳ ಮಹೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಸೋಮವಾರ ಬೆಳಿಗ್ಗೆ 6ರಿಂದ 10ರವರೆಗೆ ಪುರವಂತರಿಂದ ಶ್ರೀ ವೀರಭದ್ರೇಶ್ವರ ಸ್ವಾಮಿ ಗುಗ್ಗುಳ ನೆರವೇರಿತು. ಹರಕೆ ಹೊತ್ತ ಮಹಿಳೆಯರು ರಾಣೇಬೆನ್ನೂರಿನ ಪುರವಂತರಾದ ಬಸವಣ್ಯಪ್ಪ ಮತ್ತು ಸಂಗಡಿಗರಿಂದ ಶಸ್ತ್ರಗಳನ್ನು ಹಾಕಿಸಿಕೊಳ್ಳುತ್ತಿದ್ದ ದೃಶ್ಯ ರೋಮಾಂಚನಕಾರಿ ಯಾಗಿತ್ತು. ವಿವಿಧ ದೇವರುಗಳ ಉತ್ಸವ ಮೂರ್ತಿಗಳು ಪಲ್ಲಕ್ಕಿಯಲ್ಲಿ ಪ್ರದಕ್ಷಿಣೆ ಹಾಕಿದ ನಂತರ, ಕೆಂಡಾರ್ಚನೆ ನಡೆಯಿತು. ನೂರಾರು ಭಕ್ತರು ಕೆಂಡ ಹಾಯ್ದರು. ಬಳಿಕ ಮಹಾ ಪ್ರಸಾದ ನಡೆಯಿತು.

ಹರಿಹರ ತಾಲ್ಲೂಕಿನ ಹಿರೇಹಾಲಿವಾಣ ಗ್ರಾಮದ ಶ್ರೀ ಹಾಲೇಶ್ವರ ಸ್ವಾಮಿ, ಶ್ರೀ ಕರಿಯಮ್ಮ ದೇವಿಯರ ಉತ್ಸವ ಮೂರ್ತಿಗಳು ಪಾಲ್ಗೊಂಡಿದ್ದವು.

ಮಧ್ಯಾಹ್ನ 3ರಿಂದ ಸಂಜೆ 6ರವರೆಗೆ ಜವುಳ ಕಾರ್ಯಕ್ರಮ ನಡೆಯಿತು. ರಾತ್ರಿ 7ರಿಂದ 10ರವರೆಗೆ ಅಡ್ಡಪಲ್ಲಕ್ಕಿ ಉತ್ಸವ ಪಾರಂಪರಿಕ ಶ್ರದ್ಧಾ-ಭಕ್ತಿ-ವೈಭವಗಳಿಂದ ನೆರವೇರಿತು. ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗ, ಹಾವೇರಿ ಜಿಲ್ಲೆಗಳು ಸೇರಿದಂತೆ, ನಾಡಿನ ವಿವಿಧ ಭಾಗಗಳಿಂದ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡರು.

ಹಿರೇಹಾಲಿವಾಣ, ಹೊನ್ನಾಳಿ ಪಟ್ಟಣ ಸೇರಿದಂತೆ ತಾಲ್ಲೂಕಿನ ಯರೇಹಳ್ಳಿ, ಯಕ್ಕನಹಳ್ಳಿ, ಕೂಲಂಬಿ, ಕುಂದೂರು, ಚಿಕ್ಕೇರಹಳ್ಳಿ, ದೊಡ್ಡೇರಹಳ್ಳಿ, ಹರಿಹರ ತಾಲೂಕಿನ ಮಲೇಬೆನ್ನೂರು, ಹರಳಹಳ್ಳಿ ಮತ್ತಿತರ ಗ್ರಾಮಗಳ ಜನತೆ, ಶ್ರೀ ವೀರಭದ್ರೇಶ್ವರ ಸ್ವಾಮಿ ಒಕ್ಕಲಿನ ನೂರಾರು ಕುಟುಂಬಸ್ಥರು ಆಗಮಿಸಿದ್ದರು.

ಹಿರೇಹಾಲಿವಾಣ ಗ್ರಾಮದ ಶ್ರೀ ಈಶ್ವರಸ್ವಾಮಿ ಸಂಘದ ಸದಸ್ಯರು ಉಚಿತವಾಗಿ ಅಡುಗೆ ತಯಾರಿಸುವ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಎಲ್ಲ ಭಕ್ತರಿಗೂ ಪ್ರಸಾದದ ವ್ಯವಸ್ಥೆ ಕಲ್ಪಿಸಲಾಗಿತ್ತು.

# ಮಲೇಬೆನ್ನೂರು : ಎಎಪಿ ಕಛೇರಿ ಉದ್ಘಾಟನೆ



ಮಲೇಬೆನ್ನೂರು ಫೆ. 6 - ಪಟ್ಟಣದಲ್ಲಿ ಎಎಪಿ ಪಕ್ಷದ ಕಛೇರಿ ಉದ್ಘಾಟನೆ ಹಾಗೂ ಮಲೇಬೆನ್ನೂರು ಬ್ಲಾಕ್ ಸಮಿತಿ ರಚನಾ ಕಾರ್ಯಕ್ರಮವು ಶುಕ್ರವಾರ ಸಂತೇ ಮೈದಾನದಲ್ಲಿ ಜರುಗಿತು. ಆಮ್ ಆದ್ಮಿ ಪಕ್ಷದ ಮುಖಂಡ ಹಾಗೂ ವಕೀಲರಾದ ಗಣೇಶ ಕೆ.ದುರ್ಗದ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ರಾಜ್ಯದಲ್ಲಿ ಜನರು ಈ ಬಾರಿ ಎಎಪಿ ಯನ್ನು ಬೆಂಬಲಿಸುವ ತೀರ್ಮಾನ ಮಾಡಿದ್ದಾರೆ ಎಂದರು. ಪಕ್ಷದ ರಾಜ್ಯ ಕಾರ್ಯಾಧ್ಯಕ್ಷ ಜಾಫರ್ ಮಹಮ್ಮುದಿನ್ , ರಾಜ್ಯ ಉಪಾಧ್ಯಕ್ಷ ಡಾ. ವಿಶ್ವನಾಥ್ , ಜಿಲ್ಲಾಧ್ಯಕ್ಷ ಚಂದ್ರು ಬಸವಂತಪ್ಪ , ಜಿಲ್ಲಾ ಕಾರ್ಯದರ್ಶಿ ಅರುಣ್ ಕುಮಾರ್ , ಜಿಲ್ಲಾ ಸಂಘಟನಾ ಕಾರ್ಯದರ್ಶಿ ಎಸ್ ಕೆ ಆದಿಲ್ ಖಾನ್, ಮುಖಂಡರಾದ ಕೆ.ರವಿಂದ್ರ, ಮಾಯಕೊಂಡ ಕ್ಷೇತ್ರದ ಅಭ್ಯರ್ಥಿ ಪ್ರೊ. ಧರ್ಮ ನಾಯಕ ಹಾಗೂ ಹರಿಹರ ತಾಲ್ಲೂಕು ಸಂಚಾಲಕ ಜಿ.ಹೆಚ್ ಬಸವರಾಜ ಹಲಸಬಾಳು, ಬಿ.ಮಲ್ಲೇಶ್, ಯೂಸುಫ್, ಜಿಯಾ, ರೋಹಿತ್, ಹೋಬಳಿ ಸಂಚಾಲಕ ಆರೀಫ್ ಸೇರಿದಂತೆ, ಇನ್ನೂ ಅನೇಕರು ಭಾಗವಹಿಸಿದ್ದರು.

## ಹತ್ತು ದಿನ ಮತದಾನ ಪ್ರಾತ್ಯಕ್ಷಿಕೆ

**(1ನೇ ಪುಟದಿಂದ)** ಒದಗಿಸಿದೆ. ಮತದಾನದ ಬಳಿಕ ಪ್ರತಿದಿನ ಮತದಾನದ ಯಂತ್ರಗಳನ್ನು ಅಗತ್ಯ ಭದ್ರತೆಯೊಂದಿಗೆ ಮಾದರಿ ಭದ್ರತಾ ಕೊಠಡಿಯಲ್ಲಿರಿಸಲಾಗುವುದು. ಇದಕ್ಕಾಗಿ ಅಗತ್ಯವಿರುವ ಎಲ್ಲ ಹಂತದ ಸಿಬ್ಬಂದಿ, ಸೆಕ್ಟರ್ ಹಾಗೂ ಇತರೆ ಅಧಿಕಾರಿಗಳನ್ನು ಆಯೋಗದ ಮಾರ್ಗಸೂಚಿಯಂತೆ ನಿಯೋಜಿಸಲಾಗಿದೆ. ಒಟ್ಟಾರೆ ನೈಜ ಮತದಾನದಂತೆ ಎಲ್ಲ ಪ್ರಕ್ರಿಯೆಗಳ ಪ್ರಾತ್ಯಕ್ಷಿಕೆ ನಡೆಯಲಿದೆ ಎಂದರು.

ಪಾಲಿಕೆಯಲ್ಲಿನ ಪ್ರಾತ್ಯಕ್ಷಿಕೆ ಕೇಂದ್ರವನ್ನು ಮಾದರಿ ಮತಗಟ್ಟೆಯ ರೀತಿಯಲ್ಲಿ ಸಿದ್ಧಪಡಿಸಲಾಗಿತ್ತು. ಮತಗಟ್ಟೆ ಅಧಿಕಾರಿ, ಮತಗಟ್ಟೆ ಸಹಾಯಕ ಸೇರಿದಂತೆ ಸಿಬ್ಬಂದಿ ಮತದಾರರ ನೋಂದಣಿ, ಮತ ಯಂತ್ರ, ವಿವಿ ಪ್ಯಾಟ್ ಬಳಸಿ ಮಾಧ್ಯಮದವರಿಂದ ಅಣಕು ಮತದಾನ ಪ್ರಕ್ರಿಯೆ ನಡೆಸಿದರು. ತಮ್ಮ ಹೆಸರು ನೋಂದಣಿ ಮಾಡಿ, ಮತ ಚಲಾಯಿಸಿ, ಚಲಾಯಿಸಿರುವ ಮತವನ್ನು ವಿವಿಪ್ಯಾಟ್‌ನಲ್ಲಿ ಖಚಿತಪಡಿಸಿಕೊಂಡರು. ಸಹಾಯಕ ಚುನಾವಣಾಧಿಕಾರಿ ಹಾಗೂ ಪರಿಷತ್ ಕಾರ್ಯದರ್ಶಿ ಕೆ. ಜಯಣ್ಣ, ಪಾಲಿಕೆ ಸಾರ್ವಜನಿಕ ಸಂಪರ್ಕಾಧಿಕಾರಿ ಸುನಿಲ್ ಈ ಸಂದರ್ಭದಲ್ಲಿದ್ದರು. ಮತಗಟ್ಟೆ ಅಧಿಕಾರಿಗಳಾಗಿ ಕಿರಣ್, ವಿನಾಯಕ ಕಾರ್ಯ ನಿರ್ವಹಿಸಿದರು.

## ಎಥೆನಾಲ್ ಬೆರಕೆ ಆರಂಭ

**(1ನೇ ಪುಟದಿಂದ)** ನೀಡಿದ್ದಾರೆ. ಮೊದಲ ಹಂತದಲ್ಲಿ 158 ನಗರಗಳಲ್ಲಿ ಶೇ.20ರಷ್ಟು ಎಥೆನಾಲ್ ಬೆರೆಸಲಾಗುವುದು. ಮುಂದಿನ ಎರಡು ವರ್ಷಗಳಲ್ಲಿ ದೇಶಾದ್ಯಂತ ಈ ಯೋಜನೆ ವಿಸ್ತಾರವಾಗಲಿದೆ. ಶೇ.10ರ ಎಥೆನಾಲ್ ಬೆರೆಸುವುದರಿಂದ ಬೊಕ್ಕಸಕ್ಕೆ 53,894 ಕೋಟಿ ರೂ.ಗಳ ಉಳಿತಾಯವಾಗಿದೆ ಹಾಗೂ ರೈತರಿಗೂ ಲಾಭವಾಗಿದೆ.

ಜೂನ್ 2022ರಲ್ಲಿ ನಿಗದಿತ ಗುರಿಗಿಂತ ಐದು ತಿಂಗಳ ಮೊದಲೇ ನಾವು ಶೇ.10ರ ಎಥೆನಾಲ್ ಬೆರೆಸುವ ಗುರಿ ಮುಟ್ಟಿದ್ದೆವು. ಈಗ ನಿಗದಿತ ಅವಧಿಗಿಂತ ಐದು ವರ್ಷ ಮೊದಲೇ 2025ರ ವೇಳೆಗೆ ಶೇ.20ರ ಎಥೆನಾಲ್ ಬೆರೆಸುವ ಗುರಿ ತಲುಪಲಿದ್ದೇವೆ ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಹರ್‌ದೀಪ್ ಸಿಂಗ್ ಪುರಿ ತಿಳಿಸಿದರು.

ಕಬ್ಬು, ಅಕ್ಕಿ ಮತ್ತಿತರೆ ಕೃಷಿ ಉತ್ಪನ್ನಗಳಿಂದ ಎಥೆನಾಲ್ ಉತ್ಪಾದಿಸಲಾಗುತ್ತಿದೆ. ಭಾರತ ಈಗ ವಿಶ್ವದ ಮೂರನೇ ಅತಿ ದೊಡ್ಡ ತೈಲ ಬಳಕೆ ದೇಶವಾಗಿದೆ. ಇಂಧನಕ್ಕಾಗಿ ಭಾರತ ಆಮದನ್ನೇ ಹೆಚ್ಚಾಗಿ ಅವಲಂಬಿಸಿದೆ. ಈ ವರ್ಷ ಭಾರತ ತೈಲ ಆಮದಿಗಾಗಿ 125 ಶತಕೋಟಿ ಡಾಲರ್ ಖರ್ಚು ಮಾಡಿದೆ. ಪ್ರಸಕ್ತ ವರ್ಷ 440 ಕೋಟಿ ಲೀಟರ್ ಎಥೆನಾಲ್ ಅನ್ನು ಪೆಟ್ರೋಲ್‌ನಲ್ಲಿ ಬೆರೆಸಲಾಗಿದೆ. ಮುಂದಿನ ವರ್ಷ 540 ಕೋಟಿ ಲೀಟರ್ ಎಥೆನಾಲ್ ಪಡೆಯುವ ಗುರಿ ಇದೆ.

## ಹರಿಹರದಲ್ಲಿ ಕಾಂಗ್ರೆಸ್ ಅಡಿಪಾಯ ಭದ್ರ

**(1ನೇ ಪುಟದಿಂದ)** ರಾಮಪ್ಪ ಮಾತನಾಡಿ, ತಾಲ್ಲೂಕಿನಲ್ಲಿ ಕಾಂಗ್ರೆಸ್ ಬಲವಾಗಿದೆ. ಎಲ್ಲ ವರ್ಗದವರೂ ಕಾಂಗ್ರೆಸ್ ಪಕ್ಷದಲ್ಲಿದ್ದಾರೆ. ನೂರಕ್ಕೆ ನೂರರಷ್ಟು ಕಾಂಗ್ರೆಸ್ ಗೆಲ್ಲಲಿದೆ ಎಂದರು.

ಸೈಯದ್ ಜಾಕೀರ್ ಮಲೇಬೆನ್ನೂರು ಮಾತನಾಡಿ, ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಲು ಸಂಘಟನೆ ಬಲಪಡಿಸಬೇಕಿದೆ. ಸಂಘಟನೆಯಲ್ಲಿರುವ ಸಮಸ್ಯೆಗಳನ್ನು ಬಗೆಹರಿಸಿ, ನಂತರ ಅಭ್ಯರ್ಥಿ ಘೋಷಣೆ ಮಾಡಬೇಕು ಎಂದು ಒತ್ತಾಯಿಸಿದರು. ಸಭೆ ನಂತರ ಪ್ರಣತಿ ಶಿಂಧೆ ಅವರು ಟಿಕೆಟ್ ಆಕಾಂಕ್ಷಿಗಳ ಜೊತೆ ಪ್ರತ್ಯೇಕ ಮಾತುಕತೆ ನಡೆಸಿ ಮಾಹಿತಿ ಪಡೆದರು.

ಈ ವೇಳೆ ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷ ಹೆಚ್.ಬಿ. ಮಂಜಪ್ಪ, ಜಿಪಂ ಮಾಜಿ ಸದಸ್ಯ ಎಂ. ನಾಗೇಂದ್ರಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ತಾ.ಪಂ. ಮಾಜಿ ಅಧ್ಯಕ್ಷ ಎಂ.ಬಿ. ರೋಷನ್, ಕೆಪಿಸಿಸಿ ಸದಸ್ಯ ಕೆ. ರೇವಣಸಿದ್ದಪ್ಪ, ನಂದಿಗಾವಿ ಎನ್.ಹೆಚ್. ಶ್ರೀನಿವಾಸ್, ಕೃಷ್ಣಸಾ ಭೂತೆ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ನಗರಸಭೆ ಅಧ್ಯಕ್ಷೆ ಶಾಹೀನಾಬಾನು ದಾದಾಪೀರ್, ನಗರಸಭೆ ಸದಸ್ಯರಾದ ಶಂಕರ್ ಖಟಾವ್ಕರ್, ಬಾಬುಲಾಲ್ ಮತ್ತಿತರರು ಉಪಸ್ಥಿತರಿದ್ದರು.

### ಮಾತಿನ ಚಕಮಕಿ

**(1ನೇ ಪುಟದಿಂದ)** ಕರೆಸಬೇಕಿತ್ತು? ಎಂದು ಜಾಕೀರ್ ಪ್ರಶ್ನಿಸಿದರು. ಜಾಕೀರ್ ಸಭೆಯಿಂದ ಹೊರ ನಡೆದಾಗ, ಪಕ್ಷದ ಹಿರಿಯರು ಅವರನ್ನು ವಾಪಸ್ ಕರೆ ತಂದರು. ಆಗ ಮಧ್ಯ ಪ್ರವೇಶಿಸಿದ ವೀಕ್ಷಕಿ ಪ್ರಣತಿ ಶಿಂಧೆ, ಕ್ಷೇತ್ರದಲ್ಲಿ ಸಾಕಷ್ಟು ಆಕಾಂಕ್ಷಿತರು ಇರಬಹುದು. ಎಲ್ಲರನ್ನೂ ಪ್ರತ್ಯೇಕವಾಗಿ ಕರೆದು ಮಾತನಾಡಿ ಎ.ಐ.ಸಿ.ಸಿ.ಗೆ ವರದಿ ಕಳಿಸಲಾಗುವುದು. ಯಾರೂ ಗೊಂದಲ ಮಾಡಿಕೊಳ್ಳಬಾರದು ಎಂದು ಸಮಾಧಾನ ಪಡಿಸಿದರು.

## ಜಿಲ್ಲೆಯಲ್ಲಿ 6 ಲಕ್ಷ ರೂ. ದಂಡ ಪಾವತಿಸಿದ ಜನತೆ

**(1ನೇ ಪುಟದಿಂದ)** ಪೊಲೀಸ್ ಠಾಣೆಗಳಲ್ಲಿ ಪಾವತಿಸುವ ಮೂಲಕ ಇದರ ಸದುಪಯೋಗ ಪಡೆದುಕೊಳ್ಳುವಂತೆ ಎಸ್ಪಿ ಸಿ.ಬಿ. ರಿಷ್ಯಂತ್ ಕೋರಿದ್ದಾರೆ. ಸಾರ್ವಜನಿಕರು ಸ್ವಯಂ ಪ್ರೇರಿತವಾಗಿ ತಮ್ಮ ವಾಹನಗಳ ಮೇಲೆ ಸಂಚಾರಿ ಉಲ್ಲಂಘನೆ ಪ್ರಕರಣಗಳು ದಾಖಲಾಗಿವೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಪರಿಶೀಲಿಸಿಕೊಳ್ಳಲು ಸಂಚಾರಿ ಇ-ಚಲನ್ ಪಾವತಿ ಸ್ಥಳಗಳಲ್ಲಿ ಹಾಗೂ ಕರ್ನಾಟಕ ಒನ್ ಜಾಲತಾಣಕ್ಕೆ ಭೇಟಿ ನೀಡಿ ಇದರ ಸದುಪಯೋಗ ಪಡಿಸಿಕೊಳ್ಳಲು ತಿಳಿಸಲಾಗಿದೆ.

# 12 ಜಿಲ್ಲೆಯ ನೂತನ ಕಂದಾಯ ಗ್ರಾಮಗಳ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ

### ಅಗತ್ಯ ಸಿದ್ಧತೆಗಳಿಗೆ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಸೂಚನೆ

ದಾವಣಗೆರೆ, ಫೆ.6- ರಾಜ್ಯದ 12 ಜಿಲ್ಲೆಗಳಲ್ಲಿ ರಚಿಸಲಾದ ನೂತನ ಕಂದಾಯ ಗ್ರಾಮಗಳ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ ಕಾರ್ಯಕ್ರಮವನ್ನು ಇದೇ ತಿಂಗಳಿನಲ್ಲಿ ಜಿಲ್ಲೆಯಲ್ಲಿ ಆಯೋಜಿಸುವ ನಿರೀಕ್ಷೆ ಇದ್ದು, ಎಲ್ಲಾ ಅಧಿಕಾರಿಗಳು ತಮಗೆ ವಹಿಸಿದ ಕಾರ್ಯಗಳನ್ನು ಜವಾಬ್ದಾರಿಯುತವಾಗಿ ನಿರ್ವಹಿಸುವಂತೆ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಕ್ಕುಪತ್ರ ವಿತರಣೆಯ ರಾಜ್ಯಮಟ್ಟದ ಕಾರ್ಯಕ್ರಮ ಕುರಿತಂತೆ ಪೂರ್ವ ಸಿದ್ದತಾ ಸಭೆ ನಡೆಸಿದ ಅವರು ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನಲ್ಲಿ ಕಾರ್ಯಕ್ರಮ ಆಯೋಜನೆಗೆ ಚರ್ಚಿಸಲಾಗಿದೆ. ಶೀಘ್ರವೇ ದಿನಾಂಕ ಅಂತಿಮಗೊಳಿಸಲಾಗುವುದು ಕಾರ್ಯಕ್ರಮದ ಸಿದ್ದತೆಗಾಗಿ ವಿವಿಧ 11 ಸಮಿತಿಗಳನ್ನು ರಚಿಸಲಾಗಿದೆ. ಸಮಿತಿಯ ಸದಸ್ಯರು ಕಾರ್ಯ ಕ್ರಮದ ಸಿದ್ದತೆಗೆ ಕ್ರಮ ವಹಿಸುವಂತೆ ಸೂಚಿಸಿದರು. ಸಮಾರಂಭದಲ್ಲಿ ಅಂದಾಜು ಒಂದು ಲಕ್ಷ ಜನ ಭಾಗವಹಿಸುವ ನಿರೀಕ್ಷೆ ಇದೆ. ಆಯಾ ಜಿಲ್ಲೆಯ ಕಂದಾಯ ಗ್ರಾಮಗಳ ಫಲಾನುಭವಿಗಳ ಮಾಹಿತಿಯನ್ನು ಸಂಬಂಧಿಸಿದ ಜಿಲ್ಲೆಗಳ ಅಧಿಕಾರಿಗಳ ಸಂಪರ್ಕ ಸಾಧಿಸಿ ಪಡೆಯಬೇಕು ಎಂದು ತಿಳಿಸಿದರು.

ಸ್ವಾಗತ ಸಮಿತಿ, ವೇದಿಕೆ ನಿರ್ಮಾಣ ಹಾಗೂ ನಿರ್ವಹಣಾ ಸಮಿತಿ ಹಾಗೂ ಕಾನೂನು ಸಂಚಾರ ವ್ಯವಸ್ಥೆ ಸಮಿತಿ ಆಹಾರ ಹಾಗೂ ಕುಡಿಯುವ ನೀರಿನ ಸಮಿತಿ ಹಕ್ಕುಪತ್ರ ನಿರ್ವಹಣಾ ಸಮಿತಿ, ಆರೋಗ್ಯ ಸಮಿತಿ ವಸತಿ ಸಮಿತಿ ಅಗ್ನಿಶಾಮಕ ಸಮಿತಿ ಒಳಗೊಂಡಂತೆ 11 ಸಮಿತಿಗಳನ್ನು ರಚಿಸಲಾಯಿತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ ರಿಷ್ಯಂತ್, ಜಿ.ಪಂ ಉಪಕಾರ್ಯದರ್ಶಿ ಕೃಷ್ಣ ನಾಯಕ್, ಪಾಲಿಕೆ ಆಯುಕ್ತೆ ಶ್ರೀಮತಿ ರೇಣುಕಾ ಉಪವಿಭಾಗಾಧಿಕಾರಿ ಶ್ರೀಮತಿ ದುರ್ಗಾಶ್ರೀ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ನಾಗರಾಜ್, ಹೊನ್ನಾಳಿ ತಹಶೀಲ್ದಾರ್ ತಿರುಪತಿ, ದೂಡಾ ಆಯುಕ್ತರಾದ ಪ್ರಕಾಶ್, ತಹಶೀಲ್ದಾರ್ ಅಶ್ವತ್ಥ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

## ಪಶು, ಪಕ್ಷಿಗಳ ದಾಹ ತೀರಿಸಲು ಬಾನಿಗಳು

ದಾವಣಗೆರೆ, ಫೆ.6- ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಪಶು, ಪಕ್ಷಿಗಳಿಗೆ 30 ಕುಡಿಯುವ ನೀರಿನ ಬಾನಿಗಳನ್ನು ಇರಿಸಲಾಗುತ್ತಿದೆ. ಬಾಷ ನಗರ, ಆಜಾದ್ ನಗರ, ಗಾಂಧಿ ನಗರ, ಎಸ್.ಎಂ. ಕೃಷ್ಣ ನಗರ, ಜಾಲಿ ನಗರದಲ್ಲಿ ವಾಸಿಸುವವರು ಮತ್ತು ಪಶು, ಪಕ್ಷಿ, ಪ್ರಾಣಿಗಳ ನೀರಿನ ದಾಹ ತೀರಿಸುವಲ್ಲಿ ಆಸಕ್ತಿ ಇರುವವರು ಸಂಪರ್ಕಿಸಬೇಕಾಗಿ ವಿನಂತಿ. 9538024422

## ವಾಟ್ಸ್‌ಆಪ್ ಚಾಟ್‌ಬಾಟ್ ಮೂಲಕ ರೈಲಿನಲ್ಲಿ ಆಹಾರ

**(1ನೇ ಪುಟದಿಂದ)** ಮಾರ್ಗಗಳಲ್ಲೂ ಇದೇ ರೀತಿಯ ಸೇವೆ ಒದಗಿಸಬಹುದಾಗಿದೆ ಎಂದು ರೈಲ್ವೆ ತಿಳಿಸಿದೆ.

ಐ.ಆರ್.ಸಿ.ಟಿ.ಸಿ.ಯು ಈಗಾಗಲೇ www.catering.irctc.co.in ವೆಬ್ ತಾಣ ಹಾಗೂ ಫುಡ್ ಆನ್ ಟ್ರಾಕ್ಸ್ ಆಪ್‌ಗಳ ಮೂಲಕ ಆಹಾರ ಪೂರೈಕೆ ಮಾಡುತ್ತಿದೆ. ಪ್ರತಿದಿನ 50 ಸಾವಿರದಷ್ಟು ಜನರು ಈ ಸೌಲಭ್ಯ ಬಳಸಿಕೊಳ್ಳುತ್ತಿದ್ದಾರೆ. ಎರಡು ಹಂತಗಳಲ್ಲಿ ವಾಟ್ಸ್‌ಆಪ್ ಮೂಲಕ ಆಹಾರ ಪೂರೈಕೆಗೆ ಕ್ರಮ ತೆಗೆದುಕೊಳ್ಳಲಾಗುವುದು.

ಮೊದಲ ಹಂತ ಈಗಾಗಲೇ ಜಾರಿಯಾಗಿದೆ. ಇದರಲ್ಲಿ ವಾಟ್ಸ್‌ಆಪ್ ಮೂಲಕ ಆಹಾರ ಪಡೆಯುವ ಕುರಿತು ಮಾಹಿತಿ ನೀಡಲಾಗುತ್ತಿದೆ. ಮುಂದಿನ ಹಂತದಲ್ಲಿ ಸಂವಾದ ನಡೆಸುವ ಮೂಲಕ ಆಹಾರ ಪೂರೈಸಲು ಚಾಟ್‌ಬಾಟ್ ಬಳಸಲಾಗುವುದು.

## ಮಲೇಬೆನ್ನೂರು : ಪಾಠ ಮಾಡುತ್ತಿರುವಾಗಲೇ ಕುಸಿದು ಬಿದ್ದು ಸಾವನ್ನಪ್ಪಿದ ಶಿಕ್ಷಕ



ಮಲೇಬೆನ್ನೂರು, ಫೆ.6 - ತರಗತಿ ಪಾಠ ಮಾಡುತ್ತಿರುವಾಗ ಶಿಕ್ಷಕರೊಬ್ಬರು ತೀವ್ರ ಹೃದಯಾಘಾತದಿಂದ ಸಾವನ್ನಪ್ಪಿರುವ ಧಾರುಣ ಘಟನೆ ಭಾನುವಳ್ಳಿ ಗ್ರಾಮದಲ್ಲಿ ಸೋಮವಾರ ಬೆಳಿಗ್ಗೆ 11 ಗಂಟೆ ಸುಮಾರಿಗೆ ನಡೆದಿದೆ.

ಗ್ರಾಮದ ಕರ್ನಾಟಕ ಪಬ್ಲಿಕ್ ಸ್ಕೂಲ್‌ನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಎನ್. ವಿಜಯ್‌ಕುಮಾರ್ (54 ವರ್ಷ) ಮೃತಪಟ್ಟ ವ್ಯಕ್ತಿಯಾಗಿರುತ್ತಾನೆ.

ಕಳೆದ 1 ವರ್ಷ 3 ತಿಂಗಳಿನಿಂದ ಈ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ವಿಜಯ್‌ಕುಮಾರ್ ಅವರು ,ಸೋಮವಾರ ಬೆಳಿಗ್ಗೆ ಶಾಲೆಗೆ ಬಂದು ಪ್ರಾರ್ಥನೆಯಲ್ಲಿ ಭಾಗವಹಿಸಿ, ನಂತರ ಪಾಠ ಮಾಡಲು ತರಗತಿಗೆ ಹೋದಾಗ ಏಕಾಏಕಿ ಕುಸಿದು ಬಿದ್ದಿದ್ದಾರೆ. ತಕ್ಷಣ ವಿದ್ಯಾರ್ಥಿಗಳು ಹೋಗಿ ಮುಖ್ಯ ಶಿಕ್ಷಕ ಹನುಮಂತಪ್ಪ ಅವರಿಗೆ ತಿಳಿಸಿದಾಗ ಕೂಡಲೇ ವಿಜಯ್‌ಕುಮಾರ್ ಅವರನ್ನು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆ ತಂದು ಚಿಕಿತ್ಸೆ ಕೊಡಿಸುವಷ್ಟರಲ್ಲಿ ಹೃದಯ ಬಡಿತ ನಿಂತು ಹೋಗಿತ್ತು ಎನ್ನಲಾಗಿದೆ.

ನಂತರ ವಿಜಯ್‌ಕುಮಾರ್ ಮೃತ ದೇಹವನ್ನು ಕೆಲಹೊತ್ತು ಶಾಲೆಯಲ್ಲಿ ವಿದ್ಯಾರ್ಥಿಗಳ ಹಾಗೂ ಗ್ರಾಮಸ್ಥರ ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಈ ವೇಳೆ ಸಹೋದ್ಯೋಗಿಗಳು ಹಾಗೂ ವಿದ್ಯಾರ್ಥಿಗಳಲ್ಲಿ ದುಃಖ ಮಡು ಗಟ್ಟಿತ್ತು. ವಿಷಯ ಗೊತ್ತಾದ ತಕ್ಷಣ ಶಾಲೆಗೆ ಬಂದ ಮೃತರ ಪತ್ನಿ, ಮಕ್ಕಳು ಹಾಗೂ ಬಂಧು-ಮಿತ್ರರ ಆಕ್ರಂದನ ಮುಗಿಲು ಮುಟ್ಟಿತ್ತು.

ಬಿ.ಇ.ಓ ಹನುಮಂತಪ್ಪ, ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಹೆಚ್. ಚಂದ್ರಪ್ಪ ಸೇರಿದಂತೆ ಇನ್ನೂ ಅನೇಕರು ಶಾಲೆಗೆ ಆಗಮಿಸಿ ಮೃತರ ಅಂತಿಮ ದರ್ಶನ ಪಡೆದರು.

ಸೋಮವಾರ ಸಂಜೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕಿನ ಆರನೇಕಲ್ಲು ಹತ್ತಿರ ಮಹಾದೇವಪುರದಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿತು.

**ಮೆಚ್ಚುಗೆ :** ಶಿಕ್ಷಕ ವಿಜಯ್‌ಕುಮಾರ್ ಅವರ ಪಾಠ, ಪ್ರವಚನ ಹಾಗೂ ಅವರ ನಡೆ-ನುಡಿ ಬಗ್ಗೆ ಶಾಲೆಯ ಮುಖ್ಯ ಶಿಕ್ಷಕ ಹನುಮಂತಪ್ಪ ಹಾಗೂ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿ, ಅವರ ಆತ್ಮಕ್ಕೆ ಶಾಂತಿ ಕೋರಿದರು.


### ಪ್ಲಂಬರ್ ಮೇಸ್ತ್ರಿ ನಾಗರಾಜಪ್ಪ ಆರ್. ನಿಧನ



ದಾವಣಗೆರೆ ಕೆಟಿಜೆ ನಗರ, 2ನೇ ಮೇನ್, 10ನೇ ಕ್ರಾಸ್ ವಾಸಿ ಪ್ಲಂಬರ್ ಮೇಸ್ತ್ರಿ ನಾಗರಾಜಪ್ಪ ಆರ್. (65) ಇವರು ದಿನಾಂಕ 06.02.2023ರ ಸೋಮವಾರ ಮಧ್ಯಾಹ್ನ 2.30ಕ್ಕೆ ನಿಧನರಾದರು. ಪತ್ನಿ, ಆರು ಜನ ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 07.02.2023ರ ಮಂಗಳವಾರ ಮಧ್ಯಾಹ್ನ 1ಕ್ಕೆ ಬೂದಾಳ್ ರಸ್ತೆಯ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.



# ಭಾವಪೂರ್ಣ ಶ್ರದ್ಧಾಂಜಲಿ



ಹರಪನಹಳ್ಳಿ ಪಟ್ಟಣದ ಹಿರಿಯ ವಕೀಲರೂ, ಆದರ್ಶ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕಿನ ಮಾಜಿ ಅಧ್ಯಕ್ಷರೂ, ಹಾಲಿ ನಿರ್ದೇಶಕರೂ ಆದ

## ಶ್ರೀ ಗಂಗಾಧರ ಚ. ಗುರುಮಠ

ಅವರು, ದಿನಾಂಕ 06.02.2023ರಂದು ನಿಧನರಾಗಿದ್ದು,
ಶ್ರೀಯುತರಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ.
ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಹಾಗೂ ಅವರ ಅಗಲಿಕೆಯ
ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ
ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರುಗಳು ಮತ್ತು ಸಿಬ್ಬಂದಿ ವರ್ಗ

**ಆದರ್ಶ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಹರಪನಹಳ್ಳಿ.**



॥ ಶ್ರೀ ಸಿದ್ದೇಶ್ವರ ಪ್ರಸನ್ನ ॥ ॥ ಶ್ರೀ ಆಂಜನೇಯ ಪ್ರಸನ್ನ ॥

### ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಜಿ॥, ತಾ॥ ಶ್ಯಾಮನೂರು ಗ್ರಾಮದ ವಾಸಿ
**ಬಿಂದಪ್ಪರ ಶ್ರೀಕಂಠಪ್ಪ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 28.01.2023ನೇ ಶನಿವಾರ
ರಾತ್ರಿ 08.45ಕ್ಕೆ ನನ್ನ ಧರ್ಮಪತ್ನಿಯಾದ
**ಶ್ರೀಮತಿ ಬಿಂದಪ್ಪರ ಚಂದ್ರಪ್ರಭಾ**
ಇವರು ಲಿಂಗೈಕ್ಯರಾದ ಪ್ರಯುಕ್ತ
ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಶಿವಗಣಾರಾಧನೆ'ಯನ್ನು**
ದಿನಾಂಕ : 07.02.2023ನೇ ಮಂಗಳವಾರ ಬೆಳಿಗ್ಗೆ 10.30 ಘಂಟೆಗೆ
ಶ್ರೀ ಆಂಜನೇಯ ಸಮುದಾಯ ಭವನ, ಶ್ಯಾಮನೂರು, ದಾವಣಗೆರೆಯಲ್ಲಿ
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಬಿಂದಪ್ಪರ ಶ್ರೀಕಂಠಪ್ಪ ಮತ್ತು ಸಹೋದರರು
ಶ್ರೀಮತಿ ಶ್ವೇತಾ ಶ್ರೀ ಸಂತೋಷ್, ಚಿರಂಜೀವಿ ಜೇಷ್ಠಾ
ಬಿಂದಪ್ಪರ ವಂಶಸ್ಥರು, ಶ್ಯಾಮನೂರು.
ದಿ॥ ಕಲ್ಲಳ್ಳಿ ಈಶ್ವರಪ್ಪನವರ ವಂಶಸ್ಥರು, ಭೀಮಸಮುದ್ರ ಹಾಗೂ
ಬಂಧು-ಮಿತ್ರರು, ಫೋ. : 90086 85337

ವಿ.ಸೂ. : ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



### ಸಂಕ್ಲೀಪುರ ಚಿಂದಿ ಗೌಡ್ರು ಜಯಮ್ಮ ನಿಧನ



ಹರಿಹರ ತಾಲ್ಲೂಕು ಸಂಕ್ಲೀಪುರ ಗ್ರಾಮದ ವಾಸಿ
ಚಿಂದಿಗೌಡ್ರು ಹಾಲನ ಗೌಡ್ರು ಇವರ ಧರ್ಮಪತ್ನಿ
**ಚಿಂದಿಗೌಡ್ರು ಜಯಮ್ಮ**
ಇವರು, ದಿನಾಂಕ 6.02.2023ರ ಸೋಮವಾರ ಬೆಳಗ್ಗೆ 11.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 61 ವರ್ಷ ವಯಸ್ಸಾಗಿತ್ತು. ನಾಲ್ವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 6.02.2023ರ ಸೋಮವಾರ ಸಂಜೆ 5.30ಕ್ಕೆ ಮೃತರ ಸ್ವಗ್ರಾಮವಾದ ಹರಿಹರ ತಾಲ್ಲೂಕು ಸಂಕ್ಲೀಪುರ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಯಿತು.

ದುಃಖತಪ್ತ ಕುಟುಂಬ ವರ್ಗ
ಮೊ : 90080 60503

# ವಾಲ್ಮೀಕಿ ಜಾತ್ರೆ ಯಶಸ್ಸಿಗೆ ಅಗತ್ಯ ಸಹಕಾರ ನೀಡಿ

## ಪೂರ್ವ ಸಿದ್ದತೆ ಪರಿಶೀಲನಾ ಸಭೆಯಲ್ಲಿ ಜಿಲ್ಲಾಡಳಿತಕ್ಕೆ ಶಾಸಕ ಎಸ್.ವಿ ರಾಮಚಂದ್ರ ಮನವಿ





ಮಲೇಬೆನ್ನೂರು, ಫೆ. 6- ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಫೆ.08 ಹಾಗೂ 09 ರಂದು ನಡೆಯುವ 5 ನೇ ವರ್ಷದ ವಾಲ್ಮೀಕಿ ಜಾತ್ರೆಯನ್ನು ವ್ಯವಸ್ಥಿತವಾಗಿ ನಡೆಸಲು ಜಿಲ್ಲಾಡಳಿತ ಸಹಕಾರ ನೀಡುವಂತೆ ಜಾತ್ರಾ ಸಮಿತಿಯ ಅಧ್ಯಕ್ಷರೂ ಆದ ಜಗಳೂರು ಶಾಸಕ ಹಾಗೂ ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಎಸ್.ವಿ.ರಾಮಚಂದ್ರ ತಿಳಿಸಿದರು.

ಅವರು ಸೋಮವಾರ ವಾಲ್ಮೀಕಿ ಮಠದ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ವಾಲ್ಮೀಕಿ ಜಾತ್ರೆಯ ಪೂರ್ವ ಸಿದ್ದತಾ ಸಭೆಯಲ್ಲಿ ಮಾತನಾಡಿದರು. ಈ ವರ್ಷ ನಡೆಯುವ ವಾಲ್ಮೀಕಿ ಜಾತ್ರೆ ಬಹಳ ವಿಶೇಷವಾಗಿದ್ದು, ಸರ್ಕಾರ ಪರಿಶಿಷ್ಟ ಪಂಗಡಕ್ಕೆ ಮೀಸಲಾತಿ ಹೆಚ್ಚಳದ ಹಿನ್ನೆಲೆಯಲ್ಲಿ ಅದ್ದೂರಿಯಾಗಿ ಜಾತ್ರೆ ನಡೆಸಲು ತೀರ್ಮಾನಿಸಲಾಗಿದೆ. ಜಾತ್ರೆಗೆ ಹೆಚ್ಚು ಜನ ಸೇರಿಲಿದೆ. ಯಾವುದೇ ತೊಂದರೆ ಆಗದಂತೆ ಅಚ್ಚುಕಟ್ಟಾಗಿ ಜಾತ್ರೆ ಸಿದ್ದತೆಗಳನ್ನು ಕೈಗೊಳ್ಳುವಂತೆ ಸಲಹೆ ನೀಡಿದರು.

ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಮಾತನಾಡಿ, ವಾಲ್ಮೀಕಿ ಮಠದಿಂದ ರಥೋತ್ಸವ ಹಾಗೂ ವಾಲ್ಮೀಕಿ ಜಾತ್ರಾ ಮಹೋತ್ಸವಕ್ಕೆ ಅತ್ಯಂತ ಶಿಸ್ತಿನಿಂದ ವ್ಯವಸ್ಥೆ ಮಾಡಲಾಗಿದೆ. ಈ ವರ್ಷ ಜಾತ್ರೆಗೆ ಹೆಚ್ಚು ಜನರು ಸೇರುವ ನಿರೀಕ್ಷೆ ಇರುವುದರಿಂದ ಯಾವುದೇ ಸಮಸ್ಯೆಯಾಗದಂತೆ ವಿವಿಧ ಇಲಾಖಾ ಅಧಿಕಾರಿಗಳು ಪೂರ್ವ ಸಿದ್ದತೆ ಕೈಗೊಂಡು ಸಮನ್ವಯದಿಂದ ಕಾರ್ಯ ನಿರ್ವಹಿಸುವಂತೆ ಸೂಚನೆ ನೀಡಿದರು.

ರಾಷ್ಟ್ರೀಯ ಹೆದ್ದಾರಿಯಿಂದ ರಾಜನಹಳ್ಳಿಗೆ ಪ್ರವೇಶ ಮಾಡುವ ಮಾರ್ಗದ ಅಗತ್ಯ ರಸ್ತೆ ದುರಸ್ತಿ , ಕುಡಿಯುವ ನೀರಿನ ವ್ಯವಸ್ಥೆಗೆ ಟ್ಯಾಂಕರ್‌ಗಳ ನಿಯೋಜನೆ, ಅಂಬ್ಯೂಲೆನ್ಸ್ ಹಾಗೂ ವೈದ್ಯಕೀಯ ತಂಡಗಳ ನಿಯೋಜನೆ ಹಾಗೂ ಅಗ್ನಿಶಾಮಕ ವಾಹನ ನಿಯೋಜನೆ ಸೇರಿದಂತೆ ಅಗತ್ಯ ವ್ಯವಸ್ಥೆಯನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಕಾರ್ಯಕ್ರಮದಲ್ಲಿ ಹಲವಾರು ಗಣ್ಯರು ಭಾಗವಹಿಸುವುದರಿಂದ ಯಾವುದೇ ವಿದ್ಯುತ್ ವ್ಯತ್ಯಯವಾಗದಂತೆ ಎರಡು ದಿನ ನಿರಂತರ ವಿದ್ಯುತ್ ಪೂರೈಕೆಗೆ ಕ್ರಮವಹಿಸಬೇಕು, ಸ್ವಚ್ಚತೆ ಮತ್ತು ಕಸ ವಿಲೇವಾರಿಗೆ ಹರಿಹರ ನಗರಸಭೆ ಹಾಗೂ ರಾಜನಹಳ್ಳಿ ಗ್ರಾಮ ಪಂಚಾಯಿತಿ ಜಂಟಿಯಾಗಿ ಕಾರ್ಯನಿರ್ವಹಣೆ ಮಾಡಿ ಹೆಚ್ಚುವರಿಗೆ ಸಕ್ಕಿಂಗ್ ಮಿಷನ್ ಬಳಕೆ ವಾಹನಗಳ ಮೂಲಕ ಕಸ ವಿಲೇವಾರಿಗೆ ಕ್ರಮವಹಿಸುವಂತೆ ನಿರ್ದೇಶನ ನೀಡಿದರು. ಸರ್ಕಾರದ ವಿವಿಧ ಯೋಜನೆಗಳ ಜಾಗೃತಿಗಾಗಿ ವಸ್ತು ಪ್ರದರ್ಶನ ಮಳಿಗೆಗಳನ್ನು ತೆರೆಯಬೇಕು ಹಾಗೂ ಇದೇ ಸಂದರ್ಭದಲ್ಲಿ ಹಮ್ಮಿಕೊಂಡಿರುವ ಉದ್ಯೋಗಮೇಳ ವನ್ನು ವ್ಯವಸ್ಥಿತವಾಗಿ ನಡೆಸಿಕೊಡುವಂತೆ ಕೈಗಾರಿಕೆ ಇಲಾಖೆಯ ಜಂಟಿನಿರ್ದೇಶಕರಿಗೆ ಹೇಳಿದರು.

ಹೆಲಿಪ್ಯಾಡ್ ಹಾಗೂ ಪಾರ್ಕಿಂಗ್ ಸ್ಥಳಗಳಲ್ಲಿ ಸೇರಿದಂತೆ ಎಲ್ಲಿಯೂ ಗೊಂದಲ ಆಗದಂತೆ ವ್ಯವಸ್ಥಿತವಾಗಿ ಸಿದ್ದತೆಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ ರಿಷ್ಯಂತ್ ಮಾತನಾಡಿ ಜಾತ್ರಾ ಮಹೋತ್ಸವಕ್ಕೆ ಎರಡು ದಿನ ಮಾತ್ರ ಬಾಕಿ ಇದೆ. ಸಿದ್ದತೆಗಳಲ್ಲಿ ಗಂಭೀರವಾಗಿ ತೊಡಗಿಸಿಕೊಂಡು ಯಾವುದೇ ಲೋಪವಾಗದಂತೆ ವ್ಯವಸ್ಥೆ ಮಾಡಬೇಕು. ಹೆಚ್ಚು ಜನಸಂದಣಿ ಸೇರುವುದರಿಂದ ವ್ಯವಸ್ಥಿತವಾಗಿ ಬ್ಯಾರಿಕೇಡಿಂಗ್ ಮತ್ತು ವಿದ್ಯುತ್ ದೀಪಗಳ ವ್ಯವಸ್ಥೆ, ಸಂಪರ್ಕ ರಸ್ತೆಗಳ ದುರಸ್ತಿ ಹಾಗೂ ಮಾರ್ಕಿಂಗ್ ಗಣ್ಯರು, ಅತಿಗಣ್ಯರು ಪ್ರವೇಶಕ್ಕೆ ಪ್ರತ್ಯೇಕ ವ್ಯವಸ್ಥೆ ಹಾಗೂ ಕಾರ್ಯಕ್ರಮಕ್ಕೆ ಪ್ರವೇಶದ್ವಾರ ಹಾಗೂ ನಿರ್ಗಮನ ದ್ವಾರ ಪಾರ್ಕಿಂಗ್ ವ್ಯವಸ್ಥೆಯನ್ನು ಕುರಿತಂತೆ ಸಿದ್ದತೆ ಮಾಡಿಕೊಳ್ಳುವಂತೆ ಎಎಸ್ಪಿಗೆ ಹೇಳಿದರು.

ಜಿ.ಪಂ ಸಿಇಓ ಡಾ.ಎ ಚೆನ್ನಪ್ಪ ಮಾತನಾಡಿ ಜಾತ್ರೆಯ ಯಶಸ್ಸಿಗೆ ಸಹಕರಿಸುವುದಾಗಿ ಹೇಳಿದರು. ಸಭೆಯ ದಿವ್ಯಸಾನ್ನಿಧ್ಯ ವಹಿಸಿದ್ದ ಶ್ರೀವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಮಾತನಾಡಿ, ಕಳೆದ ನಾಲ್ಕು ವರ್ಷಗಳಿಂದ ವಾಲ್ಮೀಕಿ ಜಾತ್ರಾ ಮಹೋತ್ಸವ ಆಚರಿಸಿಕೊಂಡು ಬರಲಾಗುತ್ತದೆ. ವಾಲ್ಮೀಕಿ ಜಾತ್ರೆ ವೈಚಾರಿಕ ಜಾತ್ರಾ ಆಗಿದೆ. ಈ ವರ್ಷ ವಿಶೇಷವಾಗಿ ಜಾತ್ರೆ ಆಯೋಜನೆ ಮಾಡಲಾಗಿದ್ದು, ಜಾತ್ರೆಗೆ 4 ರಿಂದ 5 ಲಕ್ಷ ಜನರು ಸೇರುವ ನಿರೀಕ್ಷೆ ಇದೆ. ಜಾತ್ರೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಜಿಲ್ಲಾಡಳಿತದ ಸಹಕಾರ ಅಗತ್ಯವಾಗಿದೆ ಎಂದರು.

ಫೆ 08 ರಂದು ಬೆಳಿಗ್ಗೆ 8 ಗಂಟೆಗೆ ಕಾರ್ಯಕ್ರಮ ಆರಂಭಗೊಳ್ಳಲಿದೆ. ಶ್ರೀಮಹರ್ಷಿ ವಾಲ್ಮೀಕಿ ಧ್ವಜಾರೋಹಣ, ಮಹಿಳಾ ಗೋಷ್ಠಿ, ಉದ್ಯೋಗ ಮೇಳ, ರೈತ ಗೋಷ್ಠಿ, ಬುಡಕಟ್ಟು ಸಂಸ್ಕೃತಿಕ ವೈಭವದ ಕಾರ್ಯಕ್ರಮಗಳು ಜರುಗಲಿವೆ. ಫೆ.09 ರಂದು ಬೆಳಿಗ್ಗೆ 6 ರಿಂದ 7 ಗಂಟೆಯವರೆಗೆ ಸ್ವಚ್ಚತಾ ಕಾರ್ಯಕ್ರಮ ಇರುತ್ತದೆ. ನೂತನ ರಥ ಲೋಕಾರ್ಪಣೆ ಹಾಗೂ ಮಹಾ ರಥೋತ್ಸವದ ನಂತರ ಧರ್ಮಸಭೆ ನಡೆನಡೆಯಲಿದೆ. 11 ಗಂಟೆಗೆ ಜನಜಾಗೃತಿ ಜಾತ್ರಾ ಮಹೋತ್ಸವ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿವೆ.

ಫೆ.09ರ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿಗಳಾದ ಎಸ್.ಸಿದ್ದರಾಮಯ್ಯ, ಹೆಚ್.ಡಿ.ಕುಮಾರಸ್ವಾಮಿ, ಡಿ ಕೆ ಶಿವಕುಮಾರ್, ನಳೀನ್ ಕುಮಾರ್ ಕಟೀಲು, ಸಿ ಎಂ ಇಬ್ರಾಹಿಂ, ಸಚಿವರಾದ ಶ್ರೀರಾಮುಲು, ಆರ್. ಅಶೋಕ, ಬೈರತಿ ಬಸವರಾಜ ಹಾಗೂ ಸತೀಶ್ ಜಾರಕಿಹೊಳಿ ಸೇರಿದಂತೆ ಇನ್ನೂ ಅನೇಕ ಗಣ್ಯರು ಭಾಗವಹಿಸಲಿದ್ದಾರೆ ಎಂದು ಸ್ವಾಮೀಜಿ ಮಾಹಿತಿ ನೀಡಿದರು. ಮಠದ ಆಡಳಿತಾಧಿಕಾರಿ ಟಿ ಓಬಳಪ್ಪ, ಜಾತ್ರಾ ಸಮಿತಿ ಸಂಚಾಲಕ ಕೆ ಪಿ ಪಾಲಯ್ಯ, ಜಿ ಪಂ ಮಾಜಿ ಸದಸ್ಯರಾದ ಎಂ ನಾಗೇಂದ್ರಪ್ಪ, ಸೊಕ್ಕೆ ನಾಗರಾಜ್, ತಾ ಪಂ ಮಾಜಿ ಅಧ್ಯಕ್ಷ ಮಾಗನಹಳ್ಳಿ ಹಾಲಪ್ಪ, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಮಠದ ಧರ್ಮದರ್ಶಿ ಕೆ ಬಿ ಮಂಜುನಾಥ್, ನಗರಸಭೆ ಸದಸ್ಯ ದಿನೇಶ್ ಬಾಬು, ಉಪ ವಿಭಾಗಾಧಿಕಾರಿ ದುರ್ಗಾಶ್ರೀ, ಜಿ.ಪಂ.ಡಿಎಸ್ ಕೃಷ್ಣನಾಯ್ಕ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಬಸವರಾಜ್ ಬಸರಗಿ, ಎಎಸ್ಪಿ ಕನ್ನಿಕಾ ಸಿಕ್ರಿವಾಲ್, ಸಿಪಿಐ ಗೌಡಪ್ಪ, ಪಿಎಸ್‌ಐ ರಾಜು ತಹಸೀಲ್ದಾರ್ ಪೃಥ್ವಿ, ತಾ ಪಂ ಇಓ ಗಂಗಾಧರನ್, ಡಿಹೆಚ್‌ಓ ಡಾ ನಾಗರಾಜ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರವಿಚಂದ್ರ, ವಾರ್ತಾಧಿಕಾರಿ ರಂಗನಾಥ್ ಮತ್ತು ಜಿಲ್ಲಾ ಹಾಗು ತಾಲೂಕು ಮಟ್ಟದ ವಿವಿಧ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು. ರಮೇಶ್ ಹೊದಿಗೆರೆ ಕಾರ್ಯಕ್ರಮ ನಿರೂಪಿಸಿದರೆ, ಕೊನೆಯಲ್ಲಿ ಪತ್ರಕರ್ತ ಜಿಗಳಿ ಪ್ರಕಾಶ್ ವಂದಿಸಿದರು.

# ದೇಶದ ಅತಿ ದೊಡ್ಡ ಹೆಲಿಕಾಪ್ಟರ್ ಘಟಕ ಉದ್ಘಾಟಿಸಿದ ಮೋದಿ

ತುಮಕೂರು, ಫೆ. 6- ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಹಿಂದೂಸ್ತಾನ್ ಏರೋ ನಾಟಿಕ್ಸ್ ಲಿಮಿಟೆಡ್ (ಹೆಚ್.ಎ.ಎಲ್.) ಕಂಪನಿಯ ದೇಶದ ಅತಿ ದೊಡ್ಡ ಹೆಲಿಕಾಪ್ಟರ್ ಉತ್ಪಾದನಾ ಘಟಕವನ್ನು ತುಮಕೂರು ಜಿಲ್ಲೆಯಲ್ಲಿ ಉದ್ಘಾಟಿಸಿದ್ದಾರೆ.

ಬೆಂಗಳೂರಿನಲ್ಲಿ ಕೇಂದ್ರ ಕಚೇರಿ ಹೊಂದಿರುವ ಹೆಚ್.ಎ.ಎಲ್., ತುಮಕೂರಿನಲ್ಲಿ 3-15 ಟನ್ ಸಾಮರ್ಥ್ಯದ ಹೆಲಿಕಾಪ್ಟರ್‌ಗಳನ್ನು ವರ್ಷಕ್ಕೆ ಸಾವಿರದಂತೆ ಉತ್ಪಾದಿಸಲು ಗುರಿ ಹೊಂದಿದೆ. ಗುಬ್ಬಿ ತಾಲ್ಲೂಕಿನಲ್ಲಿರುವ ಈ ಘಟಕದಿಂದ ಮುಂದಿನ 20 ವರ್ಷಗಳಲ್ಲಿ 4 ಲಕ್ಷ ಕೋಟಿ ರೂ.ಗಳ ಹೆಚ್ಚು ವಹಿವಾಟು ನಡೆಯುವ ನಿರೀಕ್ಷೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2016ರಲ್ಲಿ ಪ್ರಧಾನಿ ಮೋದಿ ಅವರು 615 ಎಕರೆ ಪ್ರದೇಶದಲ್ಲಿ ನಿರ್ಮಿಸಲಾಗಿರುವ ಕಾರ್ಖಾನೆಗೆ ಶಿಲಾನ್ಯಾಸ ನೆರವೇರಿಸಿದ್ದರು. ಆರಂಭಿಕ ಹಂತದಲ್ಲಿ ಈ ಘಟಕದಲ್ಲಿ ಹಗುರ ಹೆಲಿಕಾಪ್ಟರ್‌ಗಳು ಉತ್ಪಾದನೆಯಾಗಲಿವೆ.


### ಮೊದಲ ಹಂತದಲ್ಲಿ ಹಗುರ ಹೆಲಿಕಾಪ್ಟರ್‌ಗಳ ಉತ್ಪಾದನೆ

ವರ್ಷಕ್ಕೆ 30 ಹಗುರ ಹೆಲಿಕಾಪ್ಟರ್‌ಗಳನ್ನು ಉತ್ಪಾದಿಸಲಾಗುವುದು. ನಂತರ ವರ್ಷಗಳಲ್ಲಿ ಇವುಗಳ ಸಂಖ್ಯೆ ವರ್ಷಕ್ಕೆ 90ಕ್ಕೆ ಹೆಚ್ಚಲಿವೆ.

ಮುಂದಿನ ವರ್ಷಗಳಲ್ಲಿ ಈ ಘಟಕದಲ್ಲಿ ಹಗುರ ಸಮರ ಹೆಲಿಕಾಪ್ಟರ್ ಹಾಗೂ ಬಹು ಉಪಯೋಗಿ ಹೆಲಿಕಾಪ್ಟರ್‌ಗಳೂ ಉತ್ಪಾದನೆಯಾಗಲಿವೆ.



# ಲೋಕಾಯುಕ್ತ ಬಲೆಗೆ ಸರ್ಕಾರಿ ಅಭಿಯೋಜಕಿ ರೇಖಾ



ದಾವಣಗೆರೆ, ಫೆ.6- ಪೋಕ್ಸೋ ನ್ಯಾಯಾಲಯದ ವಿಶೇಷ ಸರ್ಕಾರಿ ಅಭಿಯೋಜಕಿ ರೇಖಾ ಕೋಟೆಗೌಡರ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಪೋಕ್ಸೊ ಪ್ರಕರಣದ ಆರೋಪಿಗೆ ಸಹಾಯ ಮಾಡುವ ವಾಗ್ದಾನ ನೀಡಿ, ಪ್ರತಿಯಾಗಿ ಲಂಚ ಪಡೆಯುತ್ತಿದ್ದ ವೇಳೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು, ಹಣದೊಂದಿಗೆ ರೇಖಾ ಅವರನ್ನು ವಶಕ್ಕೆ ಪಡೆದಿದ್ದಾರೆ.

ತಾಲ್ಲೂಕಿನ ಕಿತ್ತೂರು ಗ್ರಾಮದ ಜಿ.ಟಿ. ಮದನ ಕುಮಾರ್ ವಿರುದ್ಧ 2021ರಲ್ಲಿ ಪೋಕ್ಸೋ ಪ್ರಕರಣ ದಾಖಲಾಗಿತ್ತು. ಈ ಪ್ರಕರಣದಲ್ಲಿ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ರೇಖಾ ಅವರು ಒಟ್ಟು 3 ಲಕ್ಷ ರೂ.ಲಂಚಕ್ಕೆ ಬೇಡಿಕೆ ಇರಿಸಿದ್ದರು. ಈ ಪೈಕಿ ಈ ಮೊದಲೇ 1.13 ಲಕ್ಷ ರೂ. ಪಡೆದಿದ್ದರು. ಉಳಿದ 1.87 ಲಕ್ಷರೂ. ಹಣ ನೀಡುವಂತೆ ದುಂಬಾಲು ಬಿದ್ದಿದ್ದರಲ್ಲದೆ, ಖಾತರಿಗಾಗಿ ಸಹಿ ಮಾಡಿದ ಖಾಲಿ ಚೆಕ್ ಪಡೆದಿದ್ದರು. ರೇಖಾ ಅವರು ದಾವಣಗೆರೆಯ ತಮ್ಮ ನಿವಾಸದಲ್ಲಿ 1.87 ಲಕ್ಷ ರೂ. ಹಾಗೂ ಖಾತ್ರಿಗೋಸ್ಕರ ಪಡೆದ ಚೆಕ್ ಅನ್ನು ವಾಪಸ್ ನೀಡುತ್ತಿದ್ದ ವೇಳೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ. ದಾವಣಗೆರೆ ಲೋಕಾಯುಕ್ತ ಘಟಕದ ಎಸ್‌ಪಿ ಎಂ.ಎಸ್. ಕೌಲಾಪುರೆ, ಪೊಲೀಸ್ ಇನ್‌ಸ್ಪೆಕ್ಟರ್ ಆಂಜನೇಯ ಎನ್.ಎಚ್, ರಾಷ್ಟ್ರಪತಿ ಎಚ್.ಎಸ್. ನೇತೃತ್ವದಲ್ಲಿ ದಾಳಿ ನಡೆದಿದೆ.

## ಕಾಂಗ್ರೆಸ್‌ನಿಂದ ವೈ.ರಾಮಪ್ಪ ಉಚ್ಚಾಟನೆ ಆದೇಶಕ್ಕೆ ತಡೆ



ದಾವಣಗೆರೆ, ಫೆ.6- ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಡಾ.ವೈ. ರಾಮಪ್ಪ ಅವರನ್ನು ಕಾಂಗ್ರೆಸ್ ಪಕ್ಷದಿಂದ ಉಚ್ಚಾಟಿಸಿದ ಆದೇಶವನ್ನು ತಡೆ ಹಿಡಿಯಲಾಗಿದೆ.

ಪತ್ರಿಕಾ ಪ್ರಕಟಣೆ ಮೂಲಕ ಈ ಬಗ್ಗೆ ಸ್ಪಷ್ಟಪಡಿಸಿರುವ ವೈ.ರಾಮಪ್ಪ, ಕೆಪಿಸಿಸಿ ಶಿಸ್ತುಪಾಲನಾ ಸಮಿತಿಯ ಅಧ್ಯಕ್ಷ ಕೆ. ರೆಹಮಾನ್ ಖಾನ್ ಅವರು ತಡೆಹಿಡಿದಿರುವ ಆದೇಶ ನೀಡಿದ್ದಾರೆ. ಕಾಂಗ್ರೆಸ್ ಪಕ್ಷದ ಎಲ್ಲಾ ಕಾರ್ಯ ಚಟುವಟಿಕೆಗಳಲ್ಲಿ ಯಥಾತ್ತಾಗಿ ಮುಂದುವರೆಯುವಂತೆ ಸೂಚಿಸಲಾಗಿದೆ ಎಂದಿದ್ದಾರೆ.

## ಪೊಲೀಸ್ ಠಾಣೆಯಲ್ಲಿ ಸಿಎಂ ಪುತ್ರನ ಜನ್ಮದಿನಾಚರಣೆ

ಥಾಣೆ, ಫೆ. 6 – ಮಹಾರಾಷ್ಟ್ರದ ಮುಖ್ಯಮಂತ್ರಿಯ ಮಗ ಹಾಗೂ ಲೋಕಸಭಾ ಸದಸ್ಯ ಶ್ರೀಕಾಂತ್ ಶಿಂಧೆ ಅವರು ತಮ್ಮ ಜನ್ಮ ದಿನವನ್ನು ಪೊಲೀಸ್ ಠಾಣೆಯಲ್ಲಿ ಆಚರಿಸಿಕೊಂಡಿರುವುದಕ್ಕೆ ಎನ್.ಸಿ.ಪಿ. ನಾಯಕ ಆನಂದ್ ಪರಾಂಜಪೆ ಆಕ್ಷೇಪಿಸಿದ್ದಾರೆ.

ಫೆಬ್ರವರಿ 4ರಂದು ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆ ಪೊಲೀಸ್ ಠಾಣೆಯಲ್ಲಿ ಶಿಂಧೆ ಜನ್ಮ ದಿನ ಆಚರಿಸಿಕೊಂಡಿದ್ದರು. ಈ ವೇಳೆ ಅವರು ಪೊಲೀಸರಿಗೆ ಸಮವಸ್ತ್ರ ವಿತರಿಸಿದ್ದರು.

ಈ ಬಗ್ಗೆ ವ್ಯಂಗ್ಯವಾಡಿರುವ ಪರಾಂಜಪೆ, ಈ ರೀತಿಯ ಸಂಭ್ರಮಾಚರಣೆ ಕಡ್ಡಾಯಗೊಳಿಸಬೇಕು. ಆಗ ಪೊಲೀಸರಿಗೆ ಸರಿಯಾದ ಸಮಯದಲ್ಲಿ ಹಾಗೂ ಉಚಿತವಾಗಿ ಸಮವಸ್ತ್ರ ಸಿಗಲಿದೆ ಎಂದಿದ್ದಾರೆ. ಈ ಕ್ರಮದಿಂದ ರಾಜ್ಯದ ಬೊಕ್ಕಸಕ್ಕೆ ಆಗುವ ಹೊರೆ ಕಡಿಮೆಯಾಗುತ್ತದೆ ಹಾಗೂ ಎಲ್ಲಾ ರಾಜಕೀಯ ಪಕ್ಷಗಳೂ ಸಂತೋಷವಾಗಿರುತ್ತವೆ ಎಂದವರು ಹೇಳಿದ್ದಾರೆ.

# ಇ.ವಿ. ರಾಜಧಾನಿಯಾಗಿ ಹೊರ ಹೊಮ್ಮಿರುವ ಕರ್ನಾಟಕ

ಬೆಂಗಳೂರು, ಫೆ.6 - ನವೀಕರಿಸಬಹುದಾದ ಇಂಧನವನ್ನು ಕರ್ನಾಟಕವೇ ಅತಿ ಹೆಚ್ಚು ಉತ್ಪಾದಿಸುತ್ತಿದೆ. ನಮ್ಮ ದೇಶದ ಇ.ವಿ. (ಎಲೆಕ್ಟ್ರಿಕ್ ವಾಹನ) ರಾಜಧಾನಿಯಾಗಿ ರಾಜ್ಯವೇ ಹೊರಹೊಮ್ಮಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ತಿಳಿಸಿದರು.

ನೆಲಮಂಗಲ ಬಳಿ ಮಾದಾವರದಲ್ಲಿನ ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಉಪಸ್ಥಿತಿಯಲ್ಲಿ ನಡೆದ ಇಂಧನ ಸಪ್ತಾಹ ಕಾರ್ಯಕ್ರಮದಲ್ಲಿ ಭಾಗ ವಹಿಸಿ ಮಾತನಾಡಿದ ಅವರು, ಕರ್ನಾಟಕವು ನವೀಕರಿಸಬಹುದಾದ ಇಂಧನವನ್ನು ಅತಿ ಹೆಚ್ಚು ಉತ್ಪಾದಿಸುತ್ತಿದೆ ಎಂದರು.

15 ಸಾವಿರ ಮೆಗಾವ್ಯಾಟ್ ವಿದ್ಯುತ್ ಪರಿಸರ ಸ್ನೇಹಿ ವಿಧಾನಗಳಲ್ಲಿ ಉತ್ಪಾದನೆಯಾಗುತ್ತಿದೆ. ಒಟ್ಟು ವಿದ್ಯುತ್ ಉತ್ಪಾದನೆಯ ಅರ್ಧದಷ್ಟು ಪರಿಸರ ಸ್ನೇಹಿ ವಿಧಾನದಲ್ಲಿಯೇ ಉತ್ಪಾದನೆಯಾಗುತ್ತಿದೆ.

ಮುಂದಿನ ದಿನಗಳಲ್ಲಿ ಪರಿಸರ ಇಂಧನಗಳ ಹೊಸ ಅವತಾರಗಳಿಗೆ ಕರ್ನಾಟಕ ತೆರೆದುಕೊಳ್ಳಲಿದೆ. ಹೈಡ್ರೋಜನ್ ಮತ್ತು ಅಮೋನಿಯಾ ಉತ್ಪಾದನೆಗೆ ವಿಶೇಷ ಒತ್ತು ಸಿಗಲಿದೆ ಎಂದು ಬೊಮ್ಮಾಯಿ ತಿಳಿಸಿದರು.

### ನವೀಕರಿಸುವ ಇಂಧನದಲ್ಲಿ ರಾಜ್ಯ ಮುಂಚೂಣಿ : ಸಿಎಂ

ರಾಜ್ಯದಲ್ಲಿ ಗರಿಷ್ಠ ಪ್ರಮಾಣದಲ್ಲಿ ವಿದ್ಯುತ್ ಚಾಲಿತ ವಾಹನಗಳು ಸಂಚರಿಸುತ್ತಿವೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಹೊಸ ಮಾದರಿಯ ವಾಹನಗಳು ಪರಿಚಯವಾಗಲಿದೆ. ಎಥೆನಾಲ್ ಬೆರೆತ ಇಂಧನದ ವಿಚಾರದಲ್ಲಿ ಕರ್ನಾಟಕ ಮಹತ್ವದ ಸಾಧನೆ ಮಾಡಿದೆ ಎಂದರು.

ಆರ್ಥಿಕ ಪ್ರಗತಿ ಮತ್ತು ಸಾಮಾಜಿಕ ಅಭಿವೃದ್ಧಿಗೆ ಇಂಧನ ಅತ್ಯಗತ್ಯ. ಪ್ರಧಾನಿ ಮೋದಿ ಅವರು ಇಂಧನದಲ್ಲಿ ಬದಲಾವಣೆಗೆ ಹಲವು ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಅತಿಹೆಚ್ಚು ಶಕ್ತಿ, ಅತಿ ಕಡಿಮೆ ಮಾಲಿನ್ಯ ಎನ್ನುವ ಅವರ ಕನಸನ್ನು ಕರ್ನಾಟಕ ನನಸು ಮಾಡುತ್ತಿದೆ ಎಂದು ಮುಖ್ಯಮಂತ್ರಿಗಳು ಭರವಸೆ ನೀಡಿದರು.

ಗುಜರಾತ್ ಮುಖ್ಯಮಂತ್ರಿಯಾಗಿ ವಿದ್ಯುತ್ ಉತ್ಪಾದನೆ ಮತ್ತು ವಿತರಣೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದವರು ಮೋದಿ. 'ನೆಟ್ ಝೀರೊ' ಎನ್ನುವುದು ಇಡೀ ಜಗತ್ತಿನ ಎದುರು ಇರುವ ದೊಡ್ಡ ಸವಾಲು. 2047ಕ್ಕೆ ಭಾರತವು ಈ ಗುರಿ ಮುಟ್ಟಬೇಕು ಎಂದು ಪ್ರಧಾನಿ ಸೂಚಿಸಿದ್ದರು.

## ಮೈಲಾರ ಕಾರಣಿಕ: ವಿಶೇಷ ವಾಹನ ವ್ಯವಸ್ಥೆ

ದಾವಣಗೆರೆ, ಫೆ. 6- ಇಲ್ಲಿನ ರಾಜ್ಯ ರಸ್ತೆ ಸಾರಿಗೆ ನಿಗಮದ ಘಟಕಗಳಿಂದ ಮೈಲಾರ ಕಾರಣಿಕೋತ್ಸವದ ನಿಮಿತ್ತ ಫೆ.6 ರಿಂದ 8ರವರೆಗೆ ವಿಶೇಷ ವಾಹನ ಕಾರ್ಯಾಚರಣೆಗೆ ಕ್ರಮ ಕೈಗೊಳ್ಳಲಾಗಿದೆ. ರಾಜ್ಯದಾದ್ಯಂತ ಆಗಮಿಸುವ ಭಕ್ತಾದಿಗಳ ಅನುಕೂಲಕ್ಕಾಗಿ, ಪ್ರಯಾಣಿಕರ ಜನದಟ್ಟಣೆಗನುಗುಣವಾಗಿ 40 ಹೆಚ್ಚುವರಿ ವಿಶೇಷ ವಾಹನಗಳನ್ನು ಓಡಿಸಲಾಗುವುದು. ಭಕ್ತಾದಿಗಳು ಸದುಪಯೋಗಪಡಿಸಿಕೊಳ್ಳಲು ವಿಭಾಗೀಯ ನಿಯಂತ್ರಣಾಧಿಕಾರಿಗಳು ಕೋರಿದ್ದಾರೆ.

# ಬಸವಣ್ಣ, ಅಂಬೇಡ್ಕರ್ ಎಂದಿಗೂ ಜೀವಂತ



### ತಿಂಗಳ ಸಮಾಲೋಚನ ಸಭೆ, ಕಲಿಕಾ ಚೇತರಿಕೆ ಕಾರ್ಯಕ್ರಮದಲ್ಲಿ ಬಿಇಓ ಧಾರುಕೇಶ್

ದಾವಣಗೆರೆ, ಫೆ.1- ತಾಲ್ಲೂಕಿನ ಕನ್ನಡ, ಇಂಗ್ಲಿಷ್, ಹಿಂದಿ ಭಾಷಾ ಶಿಕ್ಷಕರಿಗೆ ದಕ್ಷಿಣ ವಲಯದ ಸಂಪನ್ಮೂಲ ಕೇಂದ್ರದಲ್ಲಿ ತಿಂಗಳ ಸಮಾಲೋಚನಾ ಸಭೆ ಹಾಗೂ ಕಲಿಕಾ ಚೇತರಿಕೆ ಉಪಕ್ರಮ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ಧಾರುಕೇಶ್, ಶಾಶ್ವತವಾದ ಆತ್ಮಜ್ಞಾನ, ಸಂಸ್ಕಾರದ ಹಿಂದೆ ನಾವೆಲ್ಲರೂ ಸಾಗಿ, ಸಾವಿಲ್ಲದಂತೆ ಬದುಕಬೇಕಿದೆ. ದೇಹ ಅಷ್ಟಾವಕ್ರವಾದರೂ ಆತ್ಮಜ್ಞಾನಕ್ಕೆ ವಕ್ರತೆಯಿಲ್ಲ ಅದು ಸದಾ ದೈವಿಕಮಯ. ಈ ನಿಟ್ಟಿನಲ್ಲಿ ಮಕ್ಕಳಿಗೆ ನಾವು ಶಾಶ್ವತ ಜ್ಞಾನ ಸಾವಿಲ್ಲದಂತಹ ಆತ್ಮ ಜ್ಞಾನವನ್ನು ಧಾರೆಯೆರೆಯಲು ಸದಾ ಮುಂದಾಗಬೇಕು.

ನಮ್ಮಿಂದಾದ ಏನಾದರೂ ಕಾಯಕ ಮಾಡುತ್ತಲೇ ಇರಬೇಕು. ಬಸವಣ್ಣ, ಅಕ್ಕಮಹಾದೇವಿ, ಅಂಬೇಡ್ಕರ್ ಇಂದೂ ಬದುಕಿದ್ದಾರೆ, ಅದೂ ಶಾಶ್ವತವಾಗಿ. ತಮ್ಮ ದೇಹ ಮೀರಿ ಆತ್ಮಜ್ಞಾನ ಸಂಪಾದನೆ ಮಾಡಿದ್ದರಿಂದ ಅವರೆಂದೂ ಅಮರರು.

ನಶ್ವರವಾದ ಭೌತಿಕ ಜಗತ್ತಿನ ಮಾಯೆಯ ಹಿಂದೆ ಸಾಗಿದರೆ ನಾವು ಇದ್ದೂ ಸತ್ತಂತೆ. ಶಾಶ್ವತವಾದ ಜ್ಞಾನದ ಹಿಂದೆ ಸಾಗಿ ಆತ್ಮಕ್ಕೆ ಸಂಸ್ಕಾರ ನೀಡಿದರೆ ನಮ್ಮ ಗುರುತನ್ನು ಈ ನೆಲದಲ್ಲಿ ಸದಾ ಕಾಲ ಉಳಿಸಲು ಸಾಧ್ಯ, ಅದೇ ಬಾಳುವುದರ ಜೀವಂತಿಕೆ. ಆ ನಿಟ್ಟಿನಲ್ಲಿ ನಾವು ಏನು ಬಂದರೂ ಕುಗ್ಗದೆ ನಗುನಗುತ್ತಾ ಬದುಕಿ ಜ್ಞಾನಿಗಳಾಗೋಣ ಎಂದು ಅಭಿಪ್ರಾಯಪಟ್ಟರು.

ಬಿಆರ್‌ಸಿ ಚೌಡಪ್ಪ ಮಾತನಾಡಿ, ನಮ್ಮ ಪ್ರೌಢಶಾಲಾ ಶಿಕ್ಷಕರು ಅವಿರತವಾಗಿ ಮಕ್ಕಳ ಪ್ರಗತಿಗೆ ಶ್ರಮಿಸುತ್ತಿದ್ದಾರೆ, ಆದರೆ ಎಸ್ ಎಸ್ ಎಲ್ ಸಿ ಫಲಿತಾಂಶ ಪರಿಮಾಣಾತ್ಮಕವಾಗಿ ಗುಣಾತ್ಮಕವಾಗಿ ಬರಲು ಶಿಕ್ಷಕರು ಆಸಕ್ತಿ ಕಳೆದುಕೊಳ್ಳದೆ ಪ್ರೀತಿಯಿಂದ ಶ್ರಮಿಸಬೇಕು ಎಂದರು.

ಕನ್ನಡ ಭಾಷಾ ವಿಷಯದ ಸಮಾಲೋಚನಾ ಸಭೆಯನ್ನು ಕನ್ನಡ ಭಾಷಾ ಶಿಕ್ಷಕರಾದ ಕೆ. ಎಂ. ಪಂಚಾಕ್ಷರಯ್ಯ, ಬಿರಾದಾರ್, ಮುರಿಗೇಂದ್ರಯ್ಯನವರು ಯೋಜಿತವಾಗಿ ನಡೆಸಿದರು. ಬಿಆರ್‌ಪಿ ವೀರಭದ್ರಪ್ಪ, ಭುವನೇಶ್ವರಿ, ಇಸಿಓ ಚೇತನ ಹಾಗೂ ತಾಲ್ಲೂಕಿನ ಸರ್ಕಾರಿ ಪ್ರೌಢಶಾಲೆಗಳ ಮೂರು ಭಾಷಾ ವಿಷಯಗಳ ಎಲ್ಲಾ ಹಿರಿಯ, ಕಿರಿಯ ಶಿಕ್ಷಕರು ಹಾಜರಿದ್ದರು.

ಇದೇ ಸಂದರ್ಭದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯ ಮೇಲಿನ ತುಂಬು ಅಭಿಮಾನದಿಂದ ಇಂದಿನ ಕಾರ್ಯಕ್ರಮದ ಮಧ್ಯಾಹ್ನದ ದಾಸೋಹದ ಪ್ರಾಯೋಜಕತ್ವವನ್ನು ಹೃತ್ಪೂರ್ವಕವಾಗಿ ನೀಡಿ, ನಿರ್ವಹಿಸಿದ ಹೂವಿನಮಡು ಸರ್ಕಾರಿ ಪ್ರೌಢಶಾಲೆಯ ಕನ್ನಡ ಭಾಷಾ ಶಿಕ್ಷಕಿ ಎ.ಸಿ.ಶಶಿಕಲಾ ಶಂಕರಮೂರ್ತಿ ಅವರನ್ನು ಸಭೆಯಲ್ಲಿ ಸನ್ಮಾನಿಸಲಾಯಿತು.

## ವಿದ್ಯಾಸಿರಿ ವಸತಿ ಯೋಜನೆ ಅವಧಿ ವಿಸ್ತರಣೆ

ದಾವಣಗೆರೆ, ಫೆ. 6- ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ, ಶುಲ್ಕ ವಿನಾಯಿತಿ ಮತ್ತು ವಿದ್ಯಾಸಿರಿ ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸಲು ಫೆ.28 ರವರೆಗೆ ಅವಧಿ ವಿಸ್ತರಣೆ ಮಾಡಲಾಗಿದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

## ಚೇತನ್‌ಗೆ ಅತ್ಯುತ್ತಮ ಯೋಗಪಟು ಪ್ರಶಸ್ತಿ



ದಾವಣಗೆರೆ, ಫೆ.6- ನಗರದ ಯೋಗಪಟು ಚೇತನ್ ಸುರೇಶ್ ಗುಡ್ಡದಕೇರಿ ಅವರು ಹಗರಿಬೊಮ್ಮನಹಳ್ಳಿ ತಾಲ್ಲೂಕು ಕಡಲೆಬಾಳಿನ ಸುಜ್ಞಾನ ವಿದ್ಯಾಪೀಠ ಮತ್ತು ಸಾಂಸ್ಕೃತಿಕ ರಂಗ ಕಲಾವಿದರ, ಸಾಧಕರ ಶ್ರೀ ಮಾತಾ ಪ್ರಕಾಶ್ ಸಂಸ್ಥೆಯ ರಾಜ್ಯ ಮಟ್ಟದ ಅತ್ಯುತ್ತಮ ಯೋಗಪಟು ಸೇವಾ ರತ್ನ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

## ಅಂಚೆ ವಿಭಾಗೀಯ ಡಾಕ್ ಅದಾಲತ್

ದಾವಣಗೆರೆ, ಫೆ.6- ಇದೇ ದಿನಾಂಕ 15 ರ ಸಂಜೆ 4 ಗಂಟೆಗೆ ದಾವಣಗೆರೆ ಅಂಚೆ ವಿಭಾಗೀಯ ಡಾಕ್ ಅದಾಲತ್ತನ್ನು ನಗರದ ಪ್ರಧಾನ ಅಂಚೆ ಅಧೀಕ್ಷಕರ ಕಚೇರಿಯ ಮೊದಲನೇ ಮಹಡಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಅದಾಲತ್‌ಗೆ ಸಂಬಂಧಿಸಿದಂತೆ ಮುಂದಿನ ಕ್ರಮಕ್ಕಾಗಿ ಸಾರ್ವಜನಿಕರು ಮತ್ತು ಅಂಚೆ ಗ್ರಾಹಕರು ತಮ್ಮ ದೂರು ಮತ್ತು ಸಲಹೆಗಳನ್ನು ಇದೇ ದಿನಾಂಕ 14 ರೊಳಗೆ ಕಳುಹಿಸಲು ವಿಭಾಗದ ಅಂಚೆ ಅಧೀಕ್ಷಕರು ತಿಳಿಸಿದ್ದಾರೆ

# ಸಮಸ್ಯೆಗಳ ನಿವಾರಣೆಗೆ ವಿಜ್ಞಾನ-ತಂತ್ರಜ್ಞಾನ ಅಗತ್ಯ

## ಜೈನ್ ಪಬ್ಲಿಕ್ ಶಾಲಾ ವಾರ್ಷಿಕೋತ್ಸವದಲ್ಲಿ ಇಸ್ರೋ ವಿಜ್ಞಾನಿ ಕಿರಣ್ ಕುಮಾರ್ ಆಶಯ

ದಾವಣಗೆರೆ, ಫೆ. 1- ನಮ್ಮ ದೇಶದಲ್ಲಿ ಮತ್ತಷ್ಟು ವಿಜ್ಞಾನ ಬೆಳವಣಿಗೆ ಜೊತೆಗೆ ಪ್ರಪಂಚದಲ್ಲಿ ಎದುರಾಗಿರುವ ಸಮಸ್ಯೆಗಳ ನಿವಾರಣೆ ಕಾಣಲು ಮುಂದಿನ ಯುವ ಪೀಳಿಗೆ ತಮ್ಮನ್ನು ತಾವು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ತೊಡಗಿಸಿಕೊಳ್ಳಬೇಕಾಗಿದೆ ಎಂದು ಇಸ್ರೋ ವಿಜ್ಞಾನಿ, ಮಾಜಿ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್ ಆಶಿಸಿದರು.

ಅವರು, ಬಾಡ ಕ್ರಾಸ್ ನಲ್ಲಿರುವ ಜೈನ್ ಪಬ್ಲಿಕ್ ಶಾಲಾ ಆವರಣದಲ್ಲಿ ಹಮ್ಮಿಕೊಂಡಿದ್ದ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಪ್ರಪಂಚದಲ್ಲಿ ಅಷ್ಟೇ ಅಲ್ಲದೆ ಭೂಮಿ ಮೇಲೆ ಮನುಷ್ಯ ಜೀವನ ನಡೆಸಬೇಕಾದರೆ ಆಹಾರ, ಶಕ್ತಿ ಸಿಗುವ ಹಂತದಲ್ಲಿ ಸಾಕಷ್ಟು ಸಮಸ್ಯೆಗಳು ಹೊಸದಾಗಿ ಎದುರಾಗುತ್ತಿವೆ. ಜನಸಂಖ್ಯೆ ಹೆಚ್ಚಾದಂತೆ ಈ ಸಮಸ್ಯೆಗಳ ಉಲ್ಬಣ ಸಹಜ. ಇವುಗಳ ನಿವಾರಣೆಗೆ ಪರಿಹಾರ ಕಂಡುಕೊಳ್ಳಲು ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆ ತುಂಬಾ ಅವಶ್ಯಕ ಎಂದು ತಿಳಿಸಿದರು.

ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯಲ್ಲಿ ನಮ್ಮ ದೇಶ ಹಿಂದೆ ಉಳಿದಿಲ್ಲ. ಕೋವಿಡ್ ಅನ್ನು ಎದುರಿಸುವುದರ ಜೊತೆಗೆ ಲಸಿಕೆ ತಯಾರಿಸಿ, ಜನರ ಜೀವಗಳನ್ನು ಉಳಿಸಲು ಸಾಧ್ಯವಾಗಿದ್ದೇ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯಿಂದ. ತಂತ್ರಜ್ಞಾನದ ಬೆಳವಣಿಗೆಯಲ್ಲಿ ಅದರಲ್ಲೂ ಬಾಹ್ಯಾಕಾಶದ ತಂತ್ರಜ್ಞಾನದಲ್ಲಿ ಕೆಲವೇ 5,6 ದೇಶಗಳಲ್ಲಿ ಬೆಳವಣಿಗೆಯ ಸಾಮರ್ಥ್ಯವಿದೆ. ಅವುಗಳಲ್ಲಿ ಭಾರತ ದೇಶವೂ ಒಂದಾಗಿದೆ. ನಮ್ಮ ದೇಶದಲ್ಲೇ ಓದಿದ ವಿಜ್ಞಾನಿಗಳು, ತಂತ್ರಜ್ಞಾನಿಗಳು ತಯಾರಾಗಿದ್ದು, ತಂತ್ರಜ್ಞಾನದ ಸಾಧನೆಯಲ್ಲಿ ಭಾರತ ಕೆಲವೇ ರಾಷ್ಟ್ರಗಳ ಪಂಕ್ತಿಯಲ್ಲಿದೆ ಎಂದು ಮಾಹಿತಿ ನೀಡಿದರು.



ಇದೇ ವೇಳೆ ಶಾಲೆಯ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪುರಸ್ಕರಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದ ಮೌಲ್ಯಮಾಪನ ಕುಲಸಚಿವ ಡಾ. ಕೆ. ಶಿವಶಂಕರ್, ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಉಪ ಪೊಲೀಸ್ ವರಿಷ್ಠಾಧಿಕಾರಿ ಪಿ.ಬಿ. ಪ್ರಕಾಶ್, ಜೈನ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್‌ನ ಅಧ್ಯಕ್ಷ ಅಚಲಾನಂದ ಜೈನ್, ಜೈನ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲ ಎಸ್. ನಟರಾಜ್ ಸೇರಿದಂತೆ ಇತರರು ಇದ್ದರು.

## 8ರಂದು ಅಡಿಕೆ ಮಿಲ್ ಉದ್ಘಾಟನೆ, ವಿನೂತನ ಡ್ರೈಯರ್ ಲೋಕಾರ್ಪಣೆ

ದಾವಣಗೆರೆ, ಫೆ.6- ಸ್ವದೇಶಿ ಅಡಿಕೆ ಮಿಲ್ಸ್ ಮತ್ತು ಎಂಜಿನಿಯರಿಂಗ್ ಅಡಿಕೆ ಮಿಲ್ ಉದ್ಘಾಟನೆ ಹಾಗೂ ವಿನೂತನ ಡ್ರೈಯರ್ ಲೋಕಾರ್ಪಣೆ ಕಾರ್ಯಕ್ರಮವನ್ನು ಇದೇ ದಿನಾಂಕ 8 ರಂದು ಬೆಳಿಗ್ಗೆ 10 ಗಂಟೆಗೆ ಕಾರಿಗನೂರು ಕ್ರಾಸ್, ಸೃಷ್ಠಿ ಕಾನ್ವೆಂಟ್ ಹತ್ತಿರ ಹಮ್ಮಿಕೊಳ್ಳಲಾಗಿದೆ ಎಂದು ಮಿಲ್ ಮಾಲೀಕ ಬಿ.ವಿ. ನಾಗರಾಜ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶ್ರೀಗಳ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮವನ್ನು ಕೃಷಿ ಸಚಿವ ಬಿ.ಸಿ. ಪಾಟೀಲ್ ಉದ್ಘಾಟಿಸಲಿದ್ದಾರೆ.

ಮಾಜಿ ಶಾಸಕ ಮಹಿಮಾ ಜೆ.ಪಟೇಲ್ ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಕೆ.ಮಾಡಾಳ್ ವಿರೂಪಾಕ್ಷಪ್ಪ, ಎಸ್.ಎ. ರವೀಂದ್ರನಾಥ್, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ರಾಜ್ಯ ಕಬ್ಬು ಬೆಳೆಗಾರರ ಸಂಘದ ಉಪಾಧ್ಯಕ್ಷ ತೇಜಸ್ವಿ ವಿ. ಪಟೇಲ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಎಲ್.ಬಿ. ಕಾಂತರಾಜು, ಎಂ.ಎನ್. ಶಿವಾನಂದ ಉಪಸ್ಥಿತರಿದ್ದರು.

# ಲಿಟ್ಲ್ ಚಾಂಪ್ಸ್ ಶಾಲಾ ಮಕ್ಕಳ ವಾರ್ಷಿಕೋತ್ಸವ ಸಮಾರಂಭ



ದಾವಣಗೆರೆ, ಫೆ. 6 - 'ಲಿಟ್ಲ್ ಚಾಂಪ್ಸ್ ಉತ್ಸವ 2023' ರ ಶಾಲಾ ಮಕ್ಕಳ ವಾರ್ಷಿಕೋತ್ಸವ ಸಮಾರಂಭದಂದು ಪಾಲಿಕೆಯ ಮಾಜಿ ಮಹಾಪೌರರೂ ಆದ ಹಾಲಿ ಸದಸ್ಯ ಎಸ್. ಟಿ. ವೀರೇಶ್ ಅವರು ನಾವೆಲ್ಲಾ ಸೇರಿ ಮಕ್ಕಳಿಗೆ ಒಂದು ಉತ್ತಮವಾದ ಶಿಕ್ಷಣವನ್ನು ನೀಡಬೇಕು. ಇದರ ಜೊತೆಗೆ ಮಕ್ಕಳ ಆರೋಗ್ಯದ ಕಡೆಗೂ ಅಂದರೆ ಜಂಕ್ ಫುಡ್‌ಗಳನ್ನು ಸೇವಿಸದಂತೆ ಶಿಕ್ಷಕಿಯರು ಹಾಗೂ ಪೋಷಕರು ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಸಮಾಜದಲ್ಲಿ ಈ ಮಕ್ಕಳಿಗೆ ಮುಂದೆ ಗೌರವ ಸಿಗಬೇಕೆಂದರೆ, ಅದು ಶಿಕ್ಷಣ ಎಂಬ ಅಸ್ತ್ರವನ್ನು ಪಡೆಯುವುದರಿಂದ ಮಾತ್ರ ಸಾಧ್ಯ ಎಂದು ಈ ಸಂದರ್ಭದಲ್ಲಿ ತಿಳಿಸಿದರು.

ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ದಾರುಕೇಶ್ ಮಾತನಾಡಿ, ಮಕ್ಕಳಿಗೆ ಆಸ್ತಿ ಮಾಡಬೇಡಿ, ಮಕ್ಕಳಿಗೆ ಉತ್ತಮವಾದ ಶಿಕ್ಷಣವನ್ನು ನೀಡುವುದರೊಂದಿಗೆ ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ ಹಾಗೂ ಮಕ್ಕಳನ್ನು ಭತ್ತ ಬೆಳೆಯುವ ಗದ್ದೆಗಳನ್ನಾಗಿ ಮಾಡಬೇಕೇ ಹೊರತು - ಮಕ್ಕಳನ್ನು ಭತ್ತ ತುಂಬುವ ಚೀಲವನ್ನಾಗಿ ಮಾಡಬೇಡಿ, ಪ್ರತಿ ಮಗುವಿಗೂ ಮುಂದೆ ಗುರಿ - ಹಿಂದೆ ಗುರು ಇರಬೇಕು. ಪೋಷಕರ ಕೈಯಲ್ಲಿ ಮೊಬೈಲ್ - ಮಕ್ಕಳ ಕೈಯಲ್ಲಿ ರಿಮೋಟ್ ಇವುಗಳಿಂದ ದೂರವಿರುವಂತೆ ಶಿಕ್ಷಣ, ಮಾರ್ಗದರ್ಶನವನ್ನು ನಾವುಗಳು ನೀಡಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಿದರು.

ಕೆ.ಬಿ.ಕ್ಲಸ್ಟರ್‌ನ ಸಿ.ಆರ್.ಪಿ ನಾಗರಾಜ್, ಸಂಸ್ಥೆಯ ಖಜಾಂಚಿ ಕಿರಣ್ ಕುಮಾರ್ ಪ್ರಾಸ್ತಾವಿಕ ಮಾತನಾಡಿ, ಶಾಲಾ ಮಕ್ಕಳ, ಪೋಷಕರ ಶಿಸ್ತು, ಸಹಕಾರ, ಉತ್ಸಾಹಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ವಾರ್ಷಿಕೋತ್ಸವ ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ಗೌರವ ಕಾರ್ಯದರ್ಶಿ ವಿಜಯಕುಮಾರ್ ತಾವೆಲ್ಲರೂ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯ ಕಡೆ ಗಮನಹರಿಸಬೇಕು. ಸಾಧ್ಯವಾದಷ್ಟು ಮಟ್ಟಿಗೆ ಮಕ್ಕಳನ್ನು ಮೊಬೈಲ್‌ನಿಂದ ದೂರವಿರಿಸಬೇಕು, ಮಕ್ಕಳಿಗೆ ಉತ್ತಮವಾದ ಪರಿಸರ, ವಾತಾವರಣವನ್ನು ನೀಡುವುದರಿಂದ ಮಕ್ಕಳನ್ನು ಈ ದೇಶಕ್ಕೆ ನಾವುಗಳು ಒಂದು ಉತ್ತಮ ಪ್ರಜೆಯನ್ನಾಗಿ ಮಾಡಬಹುದು ಎಂದು ತಿಳಿಸಿದರು.

ಕಾರ್ಯಕ್ರಮವನ್ನು ಭಾಗ್ಯಲಕ್ಷ್ಮಿ ಮತ್ತು ವಿಜಯಲಕ್ಷ್ಮಿ ನಿರೂಪಿಸಿದರು. ಲಾವಣ್ಯ ಪ್ರಾರ್ಥಿಸಿದರು. ಕಾವ್ಯ ಸ್ವಾಗತಿಸಿದರು. ಬಹುಮಾನ ವಿತರಣೆಯನ್ನು ನಾಗವೇಣಿ, ಶೋಭಾ, ಆಶಾ ನಡೆಸಿಕೊಟ್ಟರು. ಗಂಗಾ ವಂದಿಸಿದರು.

# ಜೀವನ ಮಟ್ಟ ಸುಧಾರಣೆಗೆ ಸ್ಥಿರ ಸರ್ಕಾರ

**(1ನೇ ಪುಟದಿಂದ)** ಕಿಲೋಮೀಟರ್ ಉದ್ದದಷ್ಟು ಆಪ್ಟಿಕಲ್ ಫೈಬರ್ ಅಳವಡಿಸಲಾಗಿದೆ. ಬ್ರಾಡ್‌ಬ್ಯಾಂಡ್ ಬಳಕೆದಾರರ ಸಂಖ್ಯೆ 13 ರಷ್ಟು ಹೆಚ್ಚಾಗಿದೆ. ಇಂಟರ್‌ನೆಟ್ ಬಳಕೆ 3 ಪಟ್ಟು ಹೆಚ್ಚಾಗಿದೆ.

ಬಡವರ್ಗದಲ್ಲಿದ್ದವರು, ಮಧ್ಯಮ ವರ್ಗಕ್ಕೆ ಬಂದಿದ್ದಾರೆ. ವಿಶ್ವದಲ್ಲೇ ಅತೀ ಹೆಚ್ಚು ಆಕಾಂಕ್ಷೆ ಹೊಂದಿರುವವರ ನಾಡಾಗಿ ನಮ್ಮ ಭಾರತ ವಿಕಸಿತಗೊಳ್ಳುತ್ತಿದೆ ಎಂದರು.

ಮುಂದಿನ ಕೆಲವೇ ದಿನಗಳಲ್ಲಿ ಎಲ್ಲಾ ಕುಟುಂಬಗಳಿಗೂ ಸೋಲಾರ್ ಒಲೆಗಳು ಬಳಕೆಗೆ ಬರಲಿವೆ. ಇದರಿಂದ ಇಂಧನ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಯಾಗಲಿದೆ ಎಂದರು.

ಭಾರತದಲ್ಲಿ ಪಳೆಯುಳಿಕೆ ಇಂಧನ ಮೂಲಗಳ ಶೋಧ ಮತ್ತು ಉತ್ಪಾದನೆಯಲ್ಲಿ ಹೂಡಿಕೆದಾರರು ಹೆಚ್ಚಿನ ಪ್ರಮಾಣದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಇದೇ ಸಂದರ್ಭದಲ್ಲಿ ಕರೆ ನೀಡಿದರು.

ಮುಂದಿನ ದಿನಗಳಲ್ಲಿ ಎಲ್‌ಪಿಜಿ ಬೇಡಿಕೆ ಶೇಕಡ 600ರಷ್ಟು ಹೆಚ್ಚಲಿದೆ. ಅದಕ್ಕೆ ಪ್ರತಿಯಾಗಿ ಇಂಧನ ಮೂಲಗಳ ಶೋಧ ಮತ್ತು ಉತ್ಪಾದನೆ ಹೆಚ್ಚಿಸಬೇಕಿದೆ. ಹೂಡಿಕೆದಾರರು ಈ ಕ್ಷೇತ್ರದಲ್ಲಿ ಹೂಡಿಕೆಗೆ ಯೋಚಿಸಬೇಕು ಎಂದರು.

ವಿದ್ಯುತ್ ಪೂರೈಕೆಯಲ್ಲಿ ಸಮಗ್ರ ಸುಧಾರಣೆ ತರುವುದಕ್ಕಾಗಿ ಒಂದು ದೇಶ- ಒಂದು ವಿತರಣಾ ಜಾಲ ಯೋಜನೆಯನ್ನು ರೂಪಿಸಲಾಗಿದೆ. ಅದಕ್ಕಾಗಿ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದರು.

ಇ.ವಿ. ಬ್ಯಾಟರಿಗಳ ದರ ಕಡಿಮೆ ಮಾಡಲು ಕ್ರಮ ತೆಗೆದುಕೊಂಡಿದ್ದೇವೆ. 50 ಗಿಗಾ ವ್ಯಾಟ್ ಸಾಮರ್ಥ್ಯದ ಅತ್ಯಾಧುನಿಕ ಕೆಮಿಸ್ಟ್ರಿ ಸೆಲ್ ತಯಾರಿಕೆಗಾಗಿ ವಿಶೇಷ ಪ್ರೋತ್ಸಾಹ ನೀಡಿದ್ದೇವೆ. ದೇಶದಲ್ಲಿ ಬ್ಯಾಟರಿ ಉತ್ಪಾದನೆಗೆ ಸಾಕಷ್ಟು ಅವಕಾಶಗಳನ್ನು ಕಲ್ಪಿಸಲಾಗಿದೆ ಎಂದರು.

ಇ-20 ಗುರಿಗಳನ್ನು ಇಂದು ಪರಿಚಯಿಸಲಾಗುತ್ತಿದೆ. ಆರಂಭದಲ್ಲಿ ಇದು ಕೆಲವೇ ನಗರಗಳಲ್ಲಿ ಮಾತ್ರವೇ ಇರುತ್ತದೆ. ಮುಂದಿನ ದಿನಗಳಲ್ಲಿ ಇಡೀ ದೇಶಕ್ಕೆ ಇದನ್ನು ವಿಸ್ತರಿಸಲಾಗುತ್ತದೆ. ವಿದ್ಯುತ್ ಉತ್ಪಾದನೆ, ವಿತರಣೆ, ಬಳಕೆಯಲ್ಲಿ ಉಳಿತಾಯಕ್ಕೆ ಹೆಚ್ಚು ಒತ್ತು ನೀಡಲಾಗುತ್ತದೆ ಎಂದು ತಿಳಿಸಿದರು.

# ಸಮಾಜದ ಶ್ರೇಷ್ಠತೆಗೆ ಶ್ರಮಿಸಿದ ಯುಗ ಪುರುಷ ಸವಿತಾ ಮಹರ್ಷಿ : ಡಾ.ಲೋಕೇಶ್



ದಾವಣಗೆರೆ, ಫೆ.6- ಸಮಾಜದ ಶ್ರೇಷ್ಠತೆಗೆ ಶ್ರಮಿಸಿದ ಯುಗಪುರುಷ ಎಂದೇ ಖ್ಯಾತರಾದ ಶ್ರೀ ಸವಿತಾ ಮಹರ್ಷಿಗಳ ಆದರ್ಶಗಳನ್ನು ಎಲ್ಲರೂ ಪಾಲಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ತಿಳಿಸಿದರು.

ಜಿಲ್ಲಾಡಳಿತ ಭವನ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಸವಿತಾ ಸಮಾಜ ಇವರ ಸಂಯುಕ್ತಾಶ್ರಯದಲ್ಲಿ ಶ್ರೀ ಸವಿತಾ ಮಹರ್ಷಿ ಸಮುದಾಯ ಭವನದಲ್ಲಿ ನಡೆದ ಶ್ರೀ ಸವಿತಾ ಮಹರ್ಷಿ ಜಯಂತಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಕಲ ಜೀವರಾಶಿಗಳಿಗೆ ಸೂರ್ಯನು ಹೇಗೆ ಅವಶ್ಯಕವಾಗಿದ್ದಾನೋ ಹಾಗೆ ಆಧುನಿಕ ಕಾಲದ ಸಕಲರಿಗೂ ಸವಿತಾ ಸಮಾಜದ ಸೇವೆ ಅಗತ್ಯವಾಗಿದೆ. ಧಾರ್ಮಿಕವಾಗಿ ಶಿವನ ಎಡಗಣ್ಣಿನಿಂದ ಹುಟ್ಟಿದ ಸವಿತಾ ಮಹರ್ಷಿಯು ದೇವಾನುದೇವತೆಗಳ ಆಯುಷ್ಕಾರ್ಯಗಳನ್ನು ಮಾಡುತ್ತಿದ್ದ, ಈ ನಿಟ್ಟಿನಲ್ಲಿ ಸಮಾಜದವರು ಕೂಡ ವೃತ್ತಿಯನ್ನಾಗಿಸಿಕೊಂಡು ಜೀವನ ನಡೆಸುತ್ತಿದ್ದಾರೆ. ತಳ ಸಮುದಾಯದ ಸವಿತಾ ಸಮಾಜವು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಸದೃಢರಾಗಿ, ಸಂಘಟಿತರಾಗುವ ಮೂಲಕ ಸರ್ಕಾರದ ಯೋಜನೆಗಳ ಪ್ರಯೋಜನ ಪಡೆಯಬೇಕು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಬಾಲರಾಜು, ವಿಶೇಷ ಉಪನ್ಯಾಸ ವೆಂಕಟಚಲಪತಿ, ರಂಗಸ್ವಾಮಿ, ಹನುಮಂತಪ್ಪ, ಪರಶುರಾಮ್ ಇತರರು ಉಪಸ್ಥಿತರಿದ್ದರು.

# ರಾಣೇಬೆನ್ನೂರಿನಲ್ಲಿ ನಾಳೆ ವಿದ್ಯುತ್ ವ್ಯತ್ಯಯ

ರಾಣೇಬೆನ್ನೂರು, ಫೆ.6- ತುರ್ತು ವಿದ್ಯುತ್ ಕಾಮಗಾರಿ ನಿಮಿತ್ತ 220 ಕೆವಿ ರಾಣೇಬೆನ್ನೂರು ವಿದ್ಯುತ್ ಉಪ-ಕೇಂದ್ರದಿಂದ ಹೊರಡುವ ಎಫ್-06 ಸಿದ್ದಾರೂಢ ಮಠ ಫೀಡರ್‌ನಲ್ಲಿ ನಾಡಿದ್ದು ದಿನಾಂಕ 8ರ ಬುಧವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಘಂಟೆಯವರೆಗೆ ಕಂಠಿ ಬೀರೇಶ್ವರ ನಗರ, ವಿಶ್ವಬಂಧು ನಗರ, ಚನ್ನೇಶ್ವರ ನಗರ, ಕಮಲಾ ನಗರ, ಸಿದ್ದಾರೂಢ ನಗರ, ಕೆ.ಎಚ್.ಬಿ ಫೇಸ್-1, ಮಾಗೋಡ ರಸ್ತೆ, ಕೆ.ಎಸ್.ಎಸ್.ಐ.ಡಿ.ಸಿ, ಎಸ್.ಟಿ.ಜೆ.ಐ.ಟಿ ಕಾಲೇಜ್, ಚಿದಂಬರ ನಗರ, ನೇಕಾರ ಕಾಲೋನಿ, ಕೆಎಚ್‌ಡಿಸಿ, ಶಾಂತಿನಗರ & ದಾನೇಶ್ವರ ನಗರ ಏರಿಯಾಗಳಿಗೆ ವಿದ್ಯುತ್ ಸರಬರಾಜು ಇರುವುದಿಲ್ಲ, ಹಾಗೂ ಬೆಳಿಗ್ಗೆ 10 ಘಂಟೆಯಿಂದ ಸಂಜೆ 6 ಘಂಟೆವರೆಗೆ ಎಫ್-4 ಮೃತ್ಯುಂಜಯ ಫೀಡರ್‌ಗೆ ಸಂಬಂಧಪಡುವ ಬೀರೇಶ್ವರ ನಗರ, ವಿದ್ಯಾನಗರ, ವಿಶ್ವಬಂಧು ನಗರ, ಈಶ್ವರ ನಗರ, ಗೌರಿಶಂಕರ ನಗರ, ಉಮಾ ಶಂಕರ ನಗರ, ಶ್ರೀರಾಮನಗರ, ಪಿ.ಬಿ. ರಸ್ತೆ, ಹಳೇ ಎಲ್.ಐ.ಸಿ ಏರಿಯಾ, ಮೃತ್ಯುಂಜಯ ನಗರ, ವಿಕಾಸನಗರ, ಬ್ಯಾಂಕ್ ಕಾಲೋನಿ ಇತ್ಯಾದಿ ಸ್ಥಳಗಳಲ್ಲಿ ವಿದ್ಯುತ್ ಸರಬರಾಜು ಇರುವುದಿಲ್ಲ.

# 'ಡಯಾಲಿಸಿಸ್' ಚಿಕಿತ್ಸೆ ಸಂಪೂರ್ಣ ಉಚಿತ: ಎಸ್ಸೆಸ್

**(1ನೇ ಪುಟದಿಂದ)** ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಬಿ. ಮುರುಗೇಶ್, ಬಾಪೂಜಿ ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ.ಕುಮಾರ್, ಮಕ್ಕಳ ತಜ್ಞ ಡಾ.ಮೂಗನಗೌಡ ಪಾಟೀಲ್, ಡಾ. ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಬಿ.ಎಸ್.ಪ್ರಸಾದ್, ಟಿ. ಸತ್ಯನಾರಾಯಣ, ಹರೀಶ್, ಕಾಂಗ್ರೆಸ್ ಮುಖಂಡರುಗಳಾದ ದಿನೇಶ್ ಕೆ.ಶೆಟ್ಟಿ, ಸೈಯದ್ ಸೈಫುಲ್ಲಾ, ಅಯೂಬ್ ಪೈಲ್ವಾನ್, ಎಸ್.ಮಲ್ಲಿಕಾರ್ಜುನ್, ಮುಸ್ತಾಕ್ ಅಹ್ಮದ್, ಮುನ್ನಾ ಪೈಲ್ವಾನ್, ಜಯಣ್ಣ, ಬುತ್ತಿ ಗಫೂರ್ ಸಾಬ್, ಇಮ್ತಿಯಾಜ್ ಹುಸೇನ್, ರಜ್ವಿ, ಪಾಲಿಕೆ ವಿಪಕ್ಷ ನಾಯಕ ಗಡಿಗುಡಾಳ್ ಮಂಜುನಾಥ್, ಸದಸ್ಯರುಗಳಾದ ಎ.ನಾಗರಾಜ್, ಎ.ಬಿ.ರಹೀಂ, ಸೈಯದ್ ಚಾರ್ಲಿ, ಜಾಕೀರ್ ಅಲಿ, ಶಫೀಕ್ ಪಂಡಿತ್, ಸವಿತಾ ಗಣೇಶ್ ಹುಲ್ಮನಿ, ಆಶಾ ಉಮೇಶ್, ಸುಧಾ ಇಟ್ಟಿಗುಡಿ ಮಂಜುನಾಥ್, ಮೀನಾಕ್ಷಿ ಜಗದೀಶ್, ಅನಿತಾಬಾಯಿ, ಶುಭ ಮಂಗಳ, ದಾಕ್ಷಾಯಿಣಮ್ಮ, ರಾಜೇಶ್ವರಿ, ಮಂಜಮ್ಮ, ಹಾಲೇಶ್ ಗೌಡ ಮತ್ತಿತರರಿದ್ದರು.

ಕಾವ್ಯ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಡಾ. ಶಾಂತಲಾ ಅರುಣಕುಮಾರ್ ಸ್ವಾಗತಿಸಿದರು. ಡಾ. ಡಿ.ಬಿ. ಶುಭಾ ಎಸ್.ಎಸ್. ಕೇರ್ ಟ್ರಸ್ಟ್ ವರದಿ ಓದಿದರು. ಡಾ. ಅನುರೂಪ ನಿರೂಪಿಸಿದರು. ಡಾ.ಜಿ. ಧನ್ಯಕುಮಾರ್ ವಂದಿಸಿದರು.

# ಇಂದು-ನಾಳೆ ಗಣಪತಿ, ಶಾರದಾಂಬ ದೇವಸ್ಥಾನಗಳ 14ನೇ ವಾರ್ಷಿಕೋತ್ಸವ

ದಾವಣಗೆರೆ : ನಗರದ ನಿಜಲಿಂಗಪ್ಪ ಬಡಾವಣೆಯಲ್ಲಿರುವ ಶ್ರೀ ಗಣಪತಿ, ಶ್ರೀ ಶಾರದಾಂಬ, ಶ್ರೀ ಚಂದ್ರಮೌಳೇಶ್ವರ ಮತ್ತು ಶ್ರೀ ಶಂಕರಾಚಾರ್ಯ ದೇವಸ್ಥಾನಗಳ 14ನೇ ವಾರ್ಷಿಕೋತ್ಸವದ ಅಂಗವಾಗಿ ಇಂದು ಮತ್ತು ನಾಳೆ ದಿನಾಂಕ 8ರಂದು ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಫೆಬ್ರವರಿ 7ರಂದು ಬೆಳಿಗ್ಗೆ 7:30 ರಿಂದ ಮಂಗಳವಾದ್ಯ ಆಚಾರ್ಯರಿಂದ ಕಳಸ ಸ್ಥಾಪನೆ, ಶ್ರೀ ಗಣಪತಿ ಮತ್ತು ಶ್ರೀ ಚಂದ್ರಮೌಳೇಶ್ವರರಿಗೆ ಅಭಿಷೇಕ, ಶ್ರೀ ಶಾರದಾಂಬ ಮೂರ್ತಿಗೆ ಸಹಸ್ರನಾಮಾರ್ಚನೆ ಸೇರಿದಂತೆ ಮೃತ್ಯುಂಜಯ ಹೋಮ, ಹವನಗಳು ನಡೆಯಲಿದ್ದು, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಮಂಗಳಾರತಿ ಇದೆ. ಸಂಜೆ 6 ಗಂಟೆಗೆ ಖ್ಯಾತ ಹಿಂದೂಸ್ತಾನಿ ಗಾಯಕಿ ವಿದುಷಿ ವಸುಧಾ ಶರ್ಮಾರಿಂದ ಸುಗಮ ಸಂಗೀತ ಕಾರ್ಯಕ್ರಮ ಶಂಕರ್ ಭವನದಲ್ಲಿ ನಡೆಯಲಿದೆ. ಸಂಜೆ 7:30ಕ್ಕೆ ಶ್ರೀ ಶಾರದಾಂಬ ದೇವಿಗೆ ಪಾಲಕಿ ಉತ್ಸವ, ರಥ ಸೇವಾ, ಅಷ್ಟಾವಧಾನ, ಮಂತ್ರ ಪುಷ್ಪ, ಮಂಗಳಾರತಿ ಕಾರ್ಯಕ್ರಮ ಜರುಗುವುದು.

ಫೆಬ್ರವರಿ 8ರಂದು ಬೆಳಿಗ್ಗೆ 8 ರಿಂದ ಕಲಾ ಹೋಮ ನಡೆಯಲಿದೆ. ಬೆಳಿಗ್ಗೆ 9ಕ್ಕೆ ಪೂರ್ಣಾಹುತಿ, ಶ್ರೀ ಗಣಪತಿ ಮೂಲ ವಿಗ್ರಹಕ್ಕೆ ಅಥರ್ವಶೀರ್ಷದಿಂದ ಅಭಿಷೇಕ ಶ್ರೀ ಚಂದ್ರಮೌಳೇಶ್ವರರಿಗೆ ಲಘುನ್ಯಾಸ ಪೂರ್ವಕ ರುದ್ರಾಭಿಷೇಕ ಮತ್ತು ಶ್ರೀ ಶಾರದಾಂಬ ಮೂಲ ಮೂರ್ತಿಗೆ ಮಹಾಭಿಷೇಕ, ಶ್ರೀ ಚಕ್ರಪೂಜೆ, ವಿಶೇಷ ಅಲಂಕಾರ, ಮಂಗಳಾರತಿ ನಂತರ ಅನ್ನ ಸಂತರ್ಪಣೆ ನಡೆಯಲಿದೆ.

ಸಂಜೆ 7:30ಕ್ಕೆ ಶ್ರೀ ಶಾರದಾಂಬ ದೇವಿಗೆ ಪಾಲಕಿ ಉತ್ಸವ, ರಥ ಸೇವೆ, ಅಷ್ಟಾವಧಾನ, ಮಂತ್ರಪುಷ್ಪ ನಂತರ ಪ್ರಸಾದ ವಿನಿಯೋಗವಿರಲಿದೆ.

# ಗಣಿತ ಶಿಕ್ಷಕರಿಗೆ ಓರಿಗಾಮಿ ಕೌಶಲ್ಯ ಕಾರ್ಯಾಗಾರ



ದಾವಣಗೆರೆ, ಫೆ.4- ನಗರದ ಸೇಂಟ್ ಜಾನ್ಸ್ ವಿದ್ಯಾಸಂಸ್ಥೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ ಪರಿಷತ್ತು ಬೆಳಗಾವಿ ಮತ್ತು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ದಾವಣಗೆರೆ, ಜಿಲ್ಲಾ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಇವರುಗಳ ಸಂಯುಕ್ತಾಶ್ರಯದಲ್ಲಿ ಗಣಿತ ಶಿಕ್ಷಕರಿಗಾಗಿ ಓರಿಗಾಮಿ ಕೌಶಲ್ಯ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದ್ದು, ಸಂಭ್ರಮದಿಂದ ಅರ್ಥಪೂರ್ಣವಾಗಿ ನಡೆಸಲಾಯಿತು.

ಮುಖ್ಯ ಅತಿಥಿಗಳಾಗಿ ಎಂ. ಸುರೇಶಪ್ಪ, ಗಣಿತ ವಿಷಯ ಪರಿವೀಕ್ಷಕರು ಉದ್ಘಾಟನಾ ಸಮಾರಂಭದಲ್ಲಿ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾದ ವಿ.ಎಸ್.ಎನ್. ಶಾಸ್ತ್ರಿ ಮಾತನಾಡಿ, ಎನ್.ಇ.ಪಿ. ನೀತಿಯ ಉದ್ದೇಶಗಳ ಬಗ್ಗೆ ಹಾಗೂ ಶಿಕ್ಷಕರ ವಿವಿಧ ರೀತಿಯ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿ, ಬೆಳೆಸಬೇಕು. ಮಕ್ಕಳ ಕಲಿಕಾ ಗುಣಮಟ್ಟ ಹೆಚ್ಚಿಸಬೇಕು ಎಂದು ಹಿತನುಡಿದರು. ಕಾರ್ಯಕ್ರಮದಲ್ಲಿ ಡಾ. ಜೆ.ಬಿ. ರಾಜ್, ಎಂ. ಸುರೇಶಪ್ಪ, ಬಿ. ಶಶಿಧರ್, ಕಾರ್ಯಾಗಾರದ ನೇತೃತ್ವ ವಹಿಸಿದ್ದ ಎಂ. ಗುರುಸಿದ್ದಸ್ವಾಮಿ, ಸಂಜಯ್ ಮಗ್ದುಮ್ ಹಾಗು ಗಣಿತ ಶಿಕ್ಷಕರು ಉಪಸ್ಥಿತರಿದ್ದರು.

# ನೂರು ಕ್ಷಯ ರೋಗಿಗಳ ದತ್ತು ಸ್ವೀಕಾರ



ದಾವಣಗೆರೆ, ಫೆ. 1- ನಿಟ್ಟುವಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದ್ದ ಪ್ರಧಾನ ಮಂತ್ರಿಗಳ ಸಂಕಲ್ಪ 2025ರ ವೇಳೆಗೆ ಕ್ಷಯ ಮುಕ್ತ ಭಾರತ ಅಭಿಯಾನದಡಿಯಲ್ಲಿ ನಾಗರಾಜ್ ಲೋಕಿಕೆರೆ ರವರು ನೂರು ಕ್ಷಯರೋಗಿಗಳನ್ನು ದತ್ತು ಪಡೆಯುವುದರ ಮೂಲಕ ಪೌಷ್ಟಿಕಾಂಶವುಳ್ಳ ಆಹಾರ ಕಿಟ್ ಗಳನ್ನು ವಿತರಿಸಿದರು.

ಈ ಸಂದರ್ಭದಲ್ಲಿ ದೂಡಾ ಅಧ್ಯಕ್ಷ ಎ.ವೈ. ಪ್ರಕಾಶ್, ಜಿಲ್ಲಾ ಆರೋಗ್ಯ ಅಧಿಕಾರಿ ನಾಗರಾಜ್, ಜಿಲ್ಲಾ ಕ್ಷಯ ರೋಗ ನಿರ್ಮೂಲನಾಧಿಕಾರಿ ಡಾ. ಗಂಗಾಧರ್, ತಾಲ್ಲೂಕು ಆರೋಗ್ಯ ಅಧಿಕಾರಿ ದೇವರಾಜ್, ನಿಟ್ಟುವಳ್ಳಿ ಪ್ರಾಥಮಿಕ ಆರೋಗ್ಯ ಅಧಿಕಾರಿ ಅಜಯ್, ಹಿರಿಯ ಕ್ಷಯ ಚಿಕಿತ್ಸಾ ಮೇಲ್ವಿಚಾರಕ ಹಾಲಸ್ವಾಮಿ, ಬಸವರಾಜ್, ಓ.ಬಿ.ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್, ನೀಲಕಂಠಪ್ಪ, ಕೃಷ್ಣಪ್ಪ ಹಾಗೂ ಇತರರು ಉಪಸ್ಥಿತರಿದ್ದರು.

# ಬಡವರ ಹಣ ದೋಚ ಹೊರಟ ಕೇಂದ್ರ

**(1ನೇ ಪುಟದಿಂದ)** ಮುಂದಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಅದಾನಿ ಹಗರಣವನ್ನು ಮುಚ್ಚಿ ಹಾಕಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ. ಆಪ್ತ ಮಿತ್ರ ಗೌತಮ್ ಅದಾನಿ ಅವರನ್ನು ರಕ್ಷಿಸಲು ಪ್ರಧಾನಿ ನರೇಂದ್ರ ಮೋದಿ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಅದಕ್ಕಾಗಿ ಸಂಸತ್‌ನಲ್ಲಿ ಚರ್ಚೆಗೆ ಅವಕಾಶ ನೀಡುತ್ತಿಲ್ಲ. ಲಕ್ಷ ಕೋಟಿಗಳ ಮೊತ್ತದ ಬಹು ದೊಡ್ಡ ಹಗರಣ ನಡೆದಿದೆ ಎಂದು ಆರೋಪಿಸಲಾಯಿತು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್ .ಬಿ ಮಂಜಪ್ಪ ಮಾತನಾಡಿ, ಕೇಂದ್ರ ಬಿಜೆಪಿ ಸರ್ಕಾರ ಭ್ರಷ್ಟಾಚಾರದಲ್ಲಿ ತೊಡಗಿದೆ. ಜನರಿಗೆ ಮಂಕುಬೂದಿ ಎರಚಿದ್ದಾರೆ. ಉದ್ಯೋಗ ಸೃಷ್ಟಿ ಮಾಡುವುದಾಗಿ ಹೇಳಿ ಯುವ ಜನತೆಯನ್ನು ವಂಚಿಸಿದೆ.

ಬಡವರ ಖಾತೆಗೆ 15 ಲಕ್ಷ ಹಾಕುವುದಾಗಿ ಹೇಳಿ ಜನತೆಗೆ ದ್ರೋಹ ಬಗೆದಿದ್ದಾರೆ.ದೇಶದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಬಿಜೆಪಿಗರು ಎಲ್ಲಾ ಸರ್ಕಾರಿ ಸಂಸ್ಥೆಗಳನ್ನು ಖಾಸಗೀಕರಣ ಮಾಡಲು ಮುಂದಾಗಿರುವುದು ಖಂಡನೀಯ ಎಂದರು. ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ ಶೆಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಅಯೂಬ್ ಪೈಲ್ವಾನ್, ಕೆ.ಜಿ. ಶಿವಕುಮಾರ್, ಬಿ.ಕೆ. ಪರಶುರಾಮ್, ಜಿ.ಸಿ. ನಿಂಗಪ್ಪ, ಎಸ್ ಮಲ್ಲಿಕಾರ್ಜುನ, ಆರೀಫ್, ಮೈನುದ್ದೀನ್, ನಂಜಾನಾಯ್ಕ್, ಸುಭಾನ್, ಚಂದ್ರು ಡೋಲಿ, ಯುವರಾಜ್ ಹಾಗೂ ಪಾಲಿಕೆ ಸದಸ್ಯರು ಉಪಸ್ಥಿತರಿದ್ದರು.

# ಇಂದು ಕುರಿ, ಮೇಕೆ ಸಾಕಾಣಿಕೆ ತರಬೇತಿ

ದಾವಣಗೆರೆ, ಫೆ. 6- ನಗರದ ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಕಾರ್ಯಕ್ರಮ ಫೆಬ್ರವರಿ 6 ಮತ್ತು 7 ರಂದು ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕೇಂದ್ರದ ಕಚೇರಿ ದೂ.ಸಂ: 08192-233787 ಸಂಪರ್ಕಿಸಿ, ಮಾಹಿತಿ ಪಡೆದುಕೊಳ್ಳಬಹುದು ಎಂದು ಪಶುವೈದ್ಯಾಧಿಕಾರಿಗಳು ತಿಳಿಸಿದ್ದಾರೆ.


**ಬೇಕಾಗಿದ್ದಾರೆ**
ಕೆಲಸಕ್ಕೆ ಹುಡುಗ-ಹುಡುಗಿಯರು ಬೇಕಾಗಿದ್ದಾರೆ.
ಶ್ರೀಧರ್ ಅಕ್ವೇರಿಯಂ
ಚರ್ಚ್ ರಸ್ತೆ, ದಾವಣಗೆರೆ
63621 49155

**ಸೈಟು, ನೆಲ ಬಾಡಿಗೆಗೆ ಇದೆ**
ಸೈಟ್ ಅಳತೆ 44x60 = 2640 ಸ್ಕೇರ್‌ಫುಟ್. ಪ್ಲಾಟ್ ನಂ.6, ನೂತನ ಕಾಲೇಜ್ ಮೇನ್ ರೋಡ್ ಬಸವೇಶ್ವರ ಸರ್ವೀಸ್ ಸೆಂಟರ್ ಪಕ್ಕ, ದಾವಣಗೆರೆ.
ಸಂಪರ್ಕಿಸಬೇಕಾದ ಮೊಬೈಲ್ ನಂ.
81056 01900, 63627 53030

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡಲು ಪುರುಷ ಅಭ್ಯರ್ಥಿ ಬೇಕಾಗಿದ್ದಾರೆ. ವಿದ್ಯಾಭ್ಯಾಸ : ಎಸ್.ಎಸ್.ಎಲ್.ಸಿ
ವಯಸ್ಸು : 25 ರಿಂದ 40 ರ ಒಳಗೆ
ಕೆಲಸದ ಸಮಯ : ಬೆಳಿಗ್ಗೆ 10 ರಿಂದ ಸಂಜೆ 8.30
ಪರಿಮಳ ಕಾಫೀ ಕಂಪನಿ, ಮಂಡಿಪೇಟೆ, ದಾವಣಗೆರೆ.
94482 72734

**KHB ಸೈಟುಗಳು ಮಾರಾಟಕ್ಕೆ**
ಕರ್ನಾಟಕ ಹೌಸಿಂಗ್ ಬೋರ್ಡ್ (ತುಂಗಭದ್ರಾ ಬಡಾವಣೆ) ದಾವಣಗೆರೆಯಲ್ಲಿ 30X40 ಅಳತೆಯ ದಕ್ಷಿಣ ದಿಕ್ಕಿನ ಸೈಟುಗಳು ಫಲಾನುಭವಿಗಳಿಂದ ನೇರ ಮಾರಾಟ
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
63605 67975

**ಮನೆಯ ರೀ ಪೇಂಟಿಂಗ್**
ಹಳೆಯ ಮತ್ತು ಹೊಸದಾದ ಮನೆ, ಆಫೀಸ್, ಗೋಡೌನ್, ಫ್ಯಾಕ್ಟರಿಗಳಿಗೆ ಕಡಿಮೆ ಖರ್ಚಿನಲ್ಲಿ ಒಳ್ಳೆಯ ಪೇಂಟಿಂಗ್ ಮಾಡಿಸಿಕೊಡಲಾಗುವುದು.
ಸಂಪರ್ಕಿಸಿ: 72046 33302

**WANTED**
PUC or Any Degree candidates and Driver required (age should be below 25 years)
( Salary 8 to 10 K)
Call: 96118 66449

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೆಯಗಳಿಗೆ ರೂಮ್ ಬಾಯ್ ಮತ್ತು ಸೂಪರ್‌ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳದೊಂದಿಗೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
ಮೊ. : 63639 54459

**WANTED**
Required Male Office Assistant
ANDANUR CHITS (R)
Ram & Co. Circle, Davanagere.

**EC / ಇಸಿ, E-swathu & Khatha Change**
Call :
96118-66449

**ಬೇಕಾಗಿದ್ದಾರೆ**
ದಾವಣಗೆರೆ ನಗರದ ಸುತ್ತ-ಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ಆಕರ್ಷಕ ವೇತನ, ESI, PF ಸೌಲಭ್ಯವಿದೆ.
SRY ASSOCIATES, DAVANGERE.
97405 02514, 73539 50027

**OM SAI HOME MADE PRODUCTS**
ಮನೆಯಲ್ಲೇ ತಯಾರಿಸಿದ ಮಸಾಲೆ ಪದಾರ್ಥಗಳು, ಸಾಂಬಾರ್ ಪುಡಿ, ದನಿಯಾ ಪುಡಿ, ಗರಂ ಮಸಾಲ ಹಾಗೂ ಕೂದಲು ಉದುರುವ ಸಮಸ್ಯೆಗೆ Hair Oil ಸಿಗುತ್ತದೆ.
96063 92059

**4BHK ಮನೆ ಬಾಡಿಗೆಗಿದೆ**
ದಾವಣಗೆರೆಯ ಎಂಸಿಸಿ ಎ ಬ್ಲಾಕ್‌ನಲ್ಲಿ ಬೋರ್‌ವೆಲ್ / ಕಾರ್ಪೊರೇಷನ್ ನೀರಿನ ಸೌಲಭ್ಯ, ಕಾರ್‌ಶೆಡ್ ಇರುವ ಸುಸಜ್ಜಿತ 4 BHK ಮನೆ ಬಾಡಿಗೆಗಿದೆ.
ಬಾಡಿಗೆ ರೂ. 30,000/-
98860 97065

**REQUIRED**
TELECALLING (only for ladies)
TEACHING FACULTY : PHYSICS, CHEMISTRY, BIOLOGY, COMPUTER SCIENCE JUNIOR LECTURER FOR SCIENCE PU COLLEGE
LOCATION : DAVANGERE
78999 05792, 87628 67557

**ಸೈಟುಗಳು ಮಾರಾಟಕ್ಕಿವೆ**
30x43 East, ನೂತನ ಕಾಲೇಜ್ ಹತ್ತಿರ, 30x40 South ಆಂಜನೇಯ ಬಡಾವಣೆಯಲ್ಲಿ 30x50 North-East ಕಾರ್ನರ್. ವಿವೇಕಾನಂದ ಬಡಾವಣೆಯಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಶನೇಶ್ವರ ದೇವಸ್ಥಾನ ಹಿಂಭಾಗ ಕಾಡಪ್ಪನವರ ಲೇಔಟ್‌ನಲ್ಲಿ 30x40, 30x40 East ಅಕ್ಕ-ಪಕ್ಕ, 60x40 East. Rate : 1950/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**WE ARE HIRING**
Teachers for CBSE school. (All Subjects), Nursery to 10th
Qualification : B.Sc. B.Ed., M.Sc. B.Ed., BA. B.Ed
Salary: 25000-30000
Send ur Resume to padmadeepapublicschool@gmail.com
Contact: 9164342779

**HOUSE FOR RENT**
2 BHK Ground floor Independent, car parking
S.S. Layout, Sarawathi Nagara.
Dakshith Iynahalli
77955 06795

**WANTED ADVISOR**
House wifes, Retired peoples, Self employes, Salaried people can also apply attractive salary+Incentives, Qualification, SSLC/PUC Pass, age 20 to 65 years, free time work
ADITYA BIRLA SUNLITE INSURANCE
Ph. : 91089 35549

**ಶಕ್ತಿ ಬೋರ್‌ವೆಲ್**
ಮನೆ ಒಳಗೆ ಮತ್ತು ಹೊರಗೆ ಕೊರೆಯುವುದು
300 ರಿಂದ 350 ಅಡಿ, ಬಿಟ್ ಸೈಜ್ 4.5
99640 78484
95906 15776

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಹರ್ಷ ಹಾರ್ಡ್‌ವೇರ್ ಅಂಡ್ ಪೈಂಟ್ಸ್
HARSHA HARDWARE AND PAINTS
ಅಶೋಕ ಚಿತ್ರಮಂದಿರದ ಎದುರು, ರೈಲ್ವೆ ಗೇಟ್ ಹತ್ತಿರ, ಸುಭಾಷ್ ರಸ್ತೆ, ದಾವಣಗೆರೆ.

**ಸೈಟು ಮಾರಾಟಕ್ಕೆ ಇದೆ**
ಎಸ್.ಎ ರವೀಂದ್ರನಾಥ ನಗರ, ಸರ್.ಎಂ.ವಿ ಪಿಯು ಕಾಲೇಜು ರೋಡ್, ಲೋಕಿಕೆರೆ, ಇಂಡಸ್ಟ್ರೀಯಲ್ ಏರಿಯಾ ರಸ್ತೆ. 40x60 ಖಾಲಿ ಸೈಟು ಉತ್ತರ ದಿಕ್ಕಿಗೆ ಮಾರಾಟಕ್ಕೆ ಇದೆ.
90663 71746, 63610 73895

**ಮಾರಾಟಕ್ಕಿದೆ**
ನಿಟ್ಟುವಳ್ಳಿ ದುರ್ಗಾಂಬಿಕ ದೇವಸ್ಥಾನದ ಹತ್ತಿರ ಡೋರ್ ನಂ ಸೈಟು 20x30 ಉತ್ತರ ಮುಖವಾಗಿರುವ ಸೈಟು ಮಾರಾಟಕ್ಕಿದೆ.
ಸಂಪರ್ಕಿಸಿ.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
81054-23876

**WORK FROM HOME**
ಮನೆಯಲ್ಲಿಯೇ ಕುಳಿತು ಕೆಲಸ ಮಾಡಿ,ಆದಾಯ ಗಳಿಸಿ 18 ರಿಂದ 70 ವರ್ಷ ವಯಸ್ಸಿನವರಿಗೂ ಆದ್ಯತೆ ಸಂಪರ್ಕಿಸಿರಿ.
ಫೋ. : 78991 75330

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಮ್ಯಾಂಗೋ ಹೋಟೆಲ್ಸ್ ನವೀನ್ ನಲ್ಲಿ ಕೆಲಸ ಮಾಡಲು ಎಲೆಕ್ಟ್ರೀಷಿಯನ್ ಬೇಕಾಗಿದ್ದಾರೆ.
ಮೊ : 7618794615 / 19

**PART TIME WORK**
ಮನೆಯಲ್ಲಿಯೇ ಕುಳಿತು ಬಿಡುವಿನ ವೇಳೆಯಲ್ಲಿ ಕೆಲಸ /Job.
ತಿಂಗಳಿಗೆ ಸಂಬಳ 12000 ರಿಂದ 18000 ರವರೆಗೂ ಸಂಪಾದಿಸಿ.
(ಕೊರಿಯರ್ ಸೌಲಭ್ಯವಿದೆ.)
87490 98879

**WANTED**
Boys & girls required for bill & data entry work at
Food Mart Supermarket
Quali: B.com
Mob : 98864 63531

**ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ**
ಅಲರ್ಟ್ ಸೆಕ್ಯೂರಿಟಿ ಅಂಡ್ ಡಿಟೆಕ್ಟಿವ್ ಫೋರ್ಸ್
ಸೆಕ್ಯೂರಿಟಿ ಗಾರ್ಡ್ ಗಳು ಬೇಕಾಗಿದ್ದಾರೆ. ಉತ್ತಮ ವೇತನ ಹಾಗೂ ಇ ಎಸ್ ಐ ಮತ್ತು ಪಿ ಎಫ್ ಸೌಲಭ್ಯ ಇರುತ್ತದೆ. ವಿಳಾಸ: ಶಿವಪ್ಪ ಸರ್ಕಲ್, 8ನೇ ಕ್ರಾಸ್, ನಿಟುವಳ್ಳಿ ಮೇನ್ ರೋಡ್, ದಾವಣಗೆರೆ.
70012 87756, 95351 56531
97409 77785

**ವಾಣಿಜ್ಯ ಕಟ್ಟಡ ಬಾಡಿಗೆಗೆ**
ಹದಡಿ ಮುಖ್ಯ ರಸ್ತೆಯಲ್ಲಿರುವ ಟಿವಿಎಸ್ ಶೋರೂಂ ಪಕ್ಕ ಹಾಗೂ ಉದಯ ಬಜಾರ್ ಎದುರಗಡೆ ಇರುವ ಸುಸಜ್ಜಿತ ವಾಣಿಜ್ಯ ಕಟ್ಟಡ ಬಾಡಿಗೆಗಿದೆ. ನೆಲ ಮಹಡಿ 3800 ಅಡಿಗಳು, ಮೊದಲನೇ ಮಹಡಿ 1600 ಅಡಿಗಳು. ಸೆಲ್ಲರ್ 2400 ಅಡಿಗಳು ಸಂಪರ್ಕಿಸಿ.
96205 95579

**ಬೇಕಾಗಿದ್ದಾರೆ**
ಬೆಣ್ಣೆ ದೋಸೆ ಭಟ್ಟರು ಬೇಕಾಗಿದ್ದಾರೆ.
ಸಂಪರ್ಕಿಸಿ :
90601 72745

**ಮಾರಾಟಕ್ಕೆ**
* ಶಕ್ತಿನಗರ(ರಾಜೇಂದ್ರ ಬಡಾವಣೆ) ದಕ್ಷಿಣ ದಿಕ್ಕಿನ ಪೂರ್ವ ಬಾಗಿಲು,3 ಫ್ಲೋರ್ ಇರುವ ಮನೆ 20×30,
* LBK ಲೇಔಟ್ (ಯರಗುಂಟೆ ರೋಡ್) ಸೈಟುಗಳು 30×40,
* ಲಕ್ಷ್ಮಿ ಲೇಔಟ್( ಜಯನಗರ) ಸೈಟ್ (ಪೂರ್ವ)25×35
78996 36597, 99165 25828

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. ಸ್ಥಳ : ದೊಡ್ಡಬಾತಿ
88920 08800

**ಸುಕ್ಷೇತ್ರ ಗಾಣಗಟ್ಟೆ**
ಶ್ರೀ ಮಾಯಮ್ಮದೇವಿ ಜ್ಯೋತಿಷ್ಯಾಲಯ
ಪಂಡಿತ್ ಭರತ್ ಭಟ್ - 81232 83279
ಇವರು ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ಹೇಳುತ್ತಾರೆ.ವಿದ್ಯೆ, ಉದ್ಯೋಗ, ಲೈಂಗಿಕ ಸಮಸ್ಯೆ,ಮಾಟ, ಮಂತ್ರ, ಸಂತಾನ, ವಶೀಕರಣ, ಆರೋಗ್ಯ ಇನ್ನೂ ನಿಮ್ಮ ಯಾವುದೇ ಸಮಸ್ಯೆಗಳಿಗೆ 3 ದಿನಗಳಲ್ಲಿ ಪರಿಹಾರ.
ಮನೆ ವಿಳಾಸ : ಅಯ್ಯಪ್ಪಸ್ವಾಮಿ ದೇವಸ್ಥಾನ ಹಿಂಭಾಗ, ಬಿ.ಐ.ಇ.ಟಿ. ಕಾಲೇಜು ರಸ್ತೆ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ

**ಬೇಕಾಗಿದ್ದಾರೆ**
ದಾವಣಗೆರೆ ನಗರದ ಶರಭೇಶ್ವರ ಊಟದ ಹೋಟೆಲ್ ನಲ್ಲಿ ರೊಟ್ಟಿ, ಚಪಾತಿ ಮಾಡಲು ಮಹಿಳೆಯರು ಮತ್ತು ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.ಆಕರ್ಷಕ ಸಂಬಳ, ಊಟ, ವಸತಿ ಸೌಲಭ್ಯ ನೀಡಲಾಗುವುದು.
ಸಂಪರ್ಕಿಸಿ: ಬಸವರಾಜಯ್ಯ ಹಿರೇಮಠ
94489 80070, 88847 04025

**ಕೆಲಸಕ್ಕೆ ಬೇಕಾಗಿದ್ದಾರೆ**
V-MAX Elevator
ITI (Welder), BE (Mech) & (Electrical) Diploma (Mech) (E&E) (E&C) Job Location (MBA) in Marketing Davanagere, Manglore, Shivamogga, Hubli
99459 34405 , 78991 34005

**WANTED**
Ambitious and Enthusiastic persons can walk-in or send your resume shakti tyres. dvg@gmail.com Manager Best in Salary in industry for suitable candidates.
Shakti Tyres
CEAT Authorized CEAT tyres
Distributor Shakti tyres ground floor, Ranganath godown APMC yard, Davanagere 577002 Karnataka India
97397 97555

**ಜೆಸಿಬಿ ಬಾಡಿಗೆಗೆ ಇದೆ**
ದಾವಣಗೆರೆಯಲ್ಲಿ ಜೆಸಿಬಿ ಬಾಡಿಗೆಗೆ ಇದೆ. ಗಂಟೆಗೆ 925 ರೂ. ಬಾಡಿಗೆಗೆ ನೀಡಲಾಗುವುದು.
(ನಗದು ವ್ಯವಹಾರ ಮಾತ್ರ)
70195 88902, 95388 70257

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡಿಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠ್. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

# ಹೊನ್ನಾಳಿಯಲ್ಲಿ 105ನೇ ದಿಂಡಿ ರಥೋತ್ಸವ



ಹೊನ್ನಾಳಿ, ಫೆ.6- ಪಟ್ಟಣದ ನಾಮದೇವ ಸಿಂಪಿ ಸಮಾಜದ ವತಿಯಿಂದ ಪಾಂಡುರಂಗ ವಿಠ್ಠಲ ರುಕುಮಾಯಿಯ 105 ನೇ ದಿಂಡಿ ರಥೋತ್ಸವ ನಡೆಯಿತು. ಮಾಘ ಶುದ್ಧ ದ್ವಾದಶಿಯಂದು ದೇವಸ್ಥಾನದಿಂದ ರಥೋತ್ಸವ ಆರಂಭಗೊಂಡು ನಾಮದೇವ ಸಿಂಪಿ ಸಮಾಜದ ಅಧ್ಯಕ್ಷ ಎಸ್.ಎಂ. ನಾಗರಾಜ್ ಮೂಳೆಕರ್ ನೇತೃತ್ವದಲ್ಲಿ ಸಮಾಜದ ಮುಖಂಡರು, ಸಂತರು ಭಜನಾ ಮಂಡಲಿ, ಸಿಂಪಿ ಯುವಕ ಮಂಡಳಿ, ರುಕ್ಮಿಣಿ ಮಹಿಳಾ ಮಂಡಳಿ ಸದಸ್ಯರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಸಮಾಜದ ಅಧ್ಯಕ್ಷ ನಾಗರಾಜ್, ಉಪನ್ಯಾಸಕ ಪಾಂಡುರಂಗ, ಶಿಕ್ಷಕ ಶ್ರೀನಿವಾಸ್, ಉಪಾಧ್ಯಕ್ಷ ಜಗನ್ನಾಥ್, ಕಾರ್ಯದರ್ಶಿ ಗಣೇಶ, ನಾಮದೇವ, ಖಜಾಂಚಿ ಆನಂದ ರಾವ್, ಗಣಪತಿ, ಶ್ರೀನಿವಾಸ, ಹಾಲೇಶಪ್ಪ, ಜಗನ್ನಾಥ್, ಮಂಜುನಾಥ್, ವಿಜಯಕುಮಾರ, ಪ್ರಶಾಂತ್, ವಿನಾಯಕ, ನಾರಾಯಣ, ಗೋಪಾಲ ಕೃಷ್ಣ ಇನ್ನಿತರರಿದ್ದರು.

## ಅದಾನಿ ವಿರುದ್ಧ ರಾಷ್ಟ್ರವ್ಯಾಪಿ ಪ್ರತಿಭಟನೆ

ನವದೆಹಲಿ, ಫೆ. 6 – ಅದಾನಿ ವಿವಾದಕ್ಕೆ ಸಂಬಂಧಿಸಿದಂತೆ ಸರ್ಕಾರದ ವಿರುದ್ಧ ವಾಗ್ದಾಳಿ ತೀವ್ರಗೊಳಿಸಿರುವ ಕಾಂಗ್ರೆಸ್, ರಾಷ್ಟ್ರವ್ಯಾಪಿ ಪ್ರತಿಭಟನೆ ನಡೆಸಿದೆ. ಸಂಸತ್ತಿನ ಉಭಯ ಸದನಗಳಲ್ಲಿ ಈ ವಿಷಯದ ಗದ್ದಲವಾಗಿ ಸತತ ಮೂರನೇ ದಿನ ಯಾವುದೇ ಕಲಾಪ ನಡೆಯಲು ಸಾಧ್ಯವಾಗಲಿಲ್ಲ.

ವಿವಿಧ ಪಕ್ಷಗಳ ಮುಖಂಡರು ಸಂಸತ್ತಿನ ಆವರಣದಲ್ಲಿರುವ ಗಾಂಧಿ ಪ್ರತಿಮೆ ಎದುರು ಪ್ರತಿಭಟನೆ ನಡೆಸಿದರು. ನಂತರ ಮುಂದಿನ ಕ್ರಮಗಳ ಕುರಿತು ಸಮಾಲೋಚನೆ ನಡೆಸಿದರು.

# ಆಂತರಿಕ ಸೌಂದರ್ಯ ವಿಕಸನಕ್ಕೆ ಓದು ಪೂರಕ

### ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ.ಮಂಜುನಾಥ್ ಕುರ್ಕಿ

ದಾವಣಗೆರೆ, ಫೆ. 6- ಆಧುನಿಕತೆಯ ಯುಗದಲ್ಲಿ ವಿಜ್ಞಾನ ನಿರೀಕ್ಷೆಗೂ ಮೀರಿ ಬೆಳೆಯುತ್ತಿದೆ. ಓದುವ ಸಂಸ್ಕೃತಿಯಿಂದ ದೂರ ಸರಿಯಲಾಗುತ್ತಿದೆ. ಆಂತರಿಕ ಅರಿವಿನ ವ್ಯಾಪ್ತಿ ಕುಗ್ಗುತ್ತಿದೆ. ಆಂತರಿಕ ಸೌಂದರ್ಯದ ವಿಕಸನಕ್ಕೆ ಓದು ಪೂರಕ ಎಂದು ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಜಿಲ್ಲಾಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ ಕುರ್ಕಿ ಹೇಳಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ಶ್ರೀ ನಿಟ್ಟೂರು ಬಜ್ಜಿ ಹನುಮಂತಪ್ಪ ಚಾರಿಟಬಲ್ ಟ್ರಸ್ಟ್ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಕವಿ ಮಹಾಂತೇಶ್ ಬಿ.ನಿಟ್ಟೂರು ವಿರಚಿತ 'ಹವಳದ ದಿಂಡು' ಕೃತಿ ಲೋಕಾರ್ಪಣೆ ಹಾಗೂ ಕಾವ್ಯ ಗಾಯನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಸ್ತುತ ಭೌತಿಕ ಒಡೆತನಕ್ಕಿಂತ ಬೌದ್ಧಿಕ ಒಡೆತನ ಮುಖ್ಯವಾಗಿದ್ದು, ಬೌದ್ಧಿಕ ಶಕ್ತಿ ಹೆಚ್ಚಿಸಿಕೊಳ್ಳಲು ಪುಸ್ತಕ ಓದುವ ಹವ್ಯಾಸವನ್ನು ರೂಢಿಸಿಕೊಳ್ಳಬೇಕಾಗಿದೆ ಎಂದರು.

ಉತ್ತಮ ನಾಗರಿಕ ಸಮಾಜ ನಿರ್ಮಾಣ ಮಾಡುವಲ್ಲಿ ಸಾಹಿತ್ಯ ಕೃತಿಗಳು ಪ್ರಮುಖ ಪಾತ್ರ ವಹಿಸುತ್ತವೆ. ಜಾಗತಿಕ ವ್ಯವಸ್ಥೆಯೊಳಗೆ ವಿವೇಕ ರಹಿತ ವಾದಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ತಪ್ಪನ್ನು ಸರಿ ಎಂದು, ಸರಿಯನ್ನು ತಪ್ಪೆಂದು ಪ್ರತಿಪಾದಿಸುವವರೇ ಹೆಚ್ಚಾಗಿದ್ದಾರೆ ಎಂದು ಹೇಳಿದರು.

ಕೃತಿ ಕುರಿತು ಆಶಯ ನುಡಿಗಳನ್ನಾಡಿದ ಕನ್ನಡ ಸಹಾಯಕ ಪ್ರಾಧ್ಯಾಪಕ ರಾಣೇಬೆನ್ನೂರಿನ ಡಾ. ಹೊನ್ನಪ್ಪ ಹೊನ್ನಪ್ಪನವರ್ ಅವರು, ಕಾವ್ಯ ಕೇವಲ ಆನಂದಕ್ಕಲ್ಲ. ಸಮಾಜ ಬದಲಾವಣೆಗಾಗಿ. ಸಾಹಿತ್ಯ ಜನ ಜೀವನದ ಗತಿಬಿಂಬ. ಕಾವ್ಯ ಗತಿಬಿಂಬವಾದರೆ ಮಾತ್ರ ಸಮಾಜ ಯಾವ ದಿಕ್ಕಿನಲ್ಲಿ ಸಾಗಬೇಕೆಂಬುದನ್ನು ತಿಳಿಸುತ್ತದೆ ಎಂದರು.

ಧಾರವಾಡ ವಿವಿಯ ಡಾ.ಆರ್.ಸಿ. ಹಿರೇಮಠ, ಕನ್ನಡ ಅಧ್ಯಯನ ಪೀಠದ ಸಹಾಯಕ ಪ್ರಾಧ್ಯಾಪಕ ಡಾ. ನಿಂಗಪ್ಪ ಮುದೇನೂರು ಮಾತನಾಡಿ, ಭವಿಷ್ಯದ ಮೇಲೆ ಬೆಳಕು ಚೆಲ್ಲುವಂತಹ ಕಾವ್ಯ ರಚನೆ ಸುಲಭವಲ್ಲ. ಕಾವ್ಯ ಸದಾ ಭಾವನಾತ್ಮಕ ಬೆಸುಗೆ ಮತ್ತು ವಾತಾವರಣವನ್ನು ಸೌಹಾರ್ದಯುತವಾಗಿಡಲು ಸಹಕರಿಸುತ್ತದೆ ಎಂದು ಹೇಳಿದರು.

ಕಾವ್ಯ ಬರೆಯುವುದು ಸುಲಭ ಎಂದು ಅನೇಕರು ಹೇಳುತ್ತಾರೆ. ವರ್ತಮಾನದ ಮೇಲೆ ಬೆಳಕು ಚೆಲ್ಲುವಂತಹ ಕಾವ್ಯ ರಚನೆ ಸುಲಭ ಸಾಧ್ಯವಲ್ಲ. ಮನುಷ್ಯನನ್ನು ಅಂತಃಕರಣದಿಂದ ಇಡಲು ಕಾವ್ಯ ಸೇತುವೆಯಾಗಿ ಕೆಲಸ ಮಾಡುತ್ತದೆ ಎಂದರು.

ಸಾಹಿತಿ ಡಾ. ಆನಂದ ಋಗ್ವೇದಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಕೆ. ಏಕಾಂತಪ್ಪ, ಜಿಲ್ಲಾ ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಸಂಘದ ಅಧ್ಯಕ್ಷ ಸಿ.ಟಿ. ರವಿ, ಕಸಾಪ ಗೌರವ ಕಾರ್ಯದರ್ಶಿ ಬಿ. ದಿಳ್ಳೆಪ್ಪ, ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ರಾಜಶೇಖರ ಗುಂಡಗಟ್ಟಿ, ಕೃತಿಕಾರ ಮಹಾಂತೇಶ ಬಿ. ನಿಟ್ಟೂರು, ಶ್ರೀ ನಿಟ್ಟೂರು ಬಜ್ಜಿ ಹನುಮಂತಪ್ಪ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಬಿ. ಹೆಚ್. ಆಂಜನೇಯ, ಇಪ್ಟಾ ಕಲಾವಿದ ಐರಣಿ ಚಂದ್ರು, ವಿದುಷಿ ಸಂಗೀತ ರಾಘವೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ಹಳೇ ಕುಂದುವಾಡ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ಕೆ.ಎ. ಮಂಜುಳ, ತ್ಯಾವಣಗಿ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಚಾರ್ಯ ವಿ.ಎಸ್. ಮಲ್ಲಿಕಾರ್ಜುನ್ ಅವರನ್ನು ಗೌರವಿಸಲಾಯಿತು.

ಸಂಗೀತ ರಾಘವೇಂದ್ರ ಪ್ರಾರ್ಥಿಸಿದರು. ಗಂಗಾಧರ ಬಿ.ಎಲ್. ನಿಟ್ಟೂರು ನಿರೂಪಿಸಿದರು. ಮಾ.ಬ. ನಾಗರಾಜ ಕುಂದೂರು ಸ್ವಾಗತಿಸಿದರು.



# ಕಸ್ತೂರಿಬಾ ಸಮಾಜದ 39ನೇ ವಾರ್ಷಿಕೋತ್ಸವ ಸಮಾರಂಭ



ದಾವಣಗೆರೆ, ಫೆ. 6 - ನಗರದ ಕಸ್ತೂರಿಬಾ ಸಮಾಜದಲ್ಲಿ ಈಚೆಗೆ 39ನೇ ವಾರ್ಷಿಕೋತ್ಸವ ಸಮಾರಂಭ ಏರ್ಪಡಿಸಲಾಗಿತ್ತು. ಸಮಾಜದ ಅಧ್ಯಕ್ಷರಾದ ಪ್ರೊ. ಶಕುಂತಲ ಗುರುಸಿದ್ಧಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಹಿರಿಯ ಕನ್ನಡ ಚಳುವಳಿಗಾರ ಬಂಕಾಪುರದ ಚನ್ನಬಸಪ್ಪ ಆಗಮಿಸಿ ನಾಡು, ನುಡಿಯ ಬಗ್ಗೆ ಅನೇಕ ಮಹನೀಯರುಗಳ ಬಗ್ಗೆ ತಿಳಿಸಿದರು. ಈ ಸಂದರ್ಭದಲ್ಲಿ ಸಮಾಜದ ಹಿರಿಯ ಸದಸ್ಯರಾದ ಶ್ರೀಮತಿ ಸುಜಾತ ಎಸ್.ಹೆಚ್. ಸಿದ್ದಲಿಂಗಸ್ವಾಮಿ ಅವರಿಗೆ ಸನ್ಮಾನಿಸಿ, ಗೌರವಿಸಲಾಯಿತು. ವಿದ್ಯಾನಗರ ಮಾರುತಿ ಪ್ರೌಢಶಾಲೆ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು.

ವೇದಿಕೆಯಲ್ಲಿ ಗೌರವ ಅಧ್ಯಕ್ಷರಾದ ಶ್ರೀಮತಿ ಸರೋಜ ಚಂದ್ರಶೇಖರ್, ಕಾರ್ಯದರ್ಶಿ ಶಶಿಕಲಾ ರುದ್ರಯ್ಯ ಉಪಸ್ಥಿತರಿದ್ದರು. ತಾರಾ ಚಿಕ್ಕೇಗೌಡರು, ಅಂಬಿಕಾ ಪ್ರಭುಶಂಕರ್ ಪ್ರಾರ್ಥಿಸಿದರು. ಶ್ರೀಮತಿ ಶಕುಂತಲಾ ಪರಮೇಶ್ವರಪ್ಪ ಸ್ವಾಗತಿಸಿದರು. ಸತ್ಯಭಾಮ ಮಂಜುನಾಥ್ ನಿರೂಪಿಸಿದರು. ಮಮತಾ ನಾಗರಾಜ್ ವಂದಿಸಿದರು.

## ಇಂದು ಚನ್ನಗಿರಿ, ಮಾಯಕೊಂಡ, ಜಗಳೂರಿನಲ್ಲಿ ಪ್ರಣತಿ ಶಿಂಧೆಯವರ ಸಭೆ



ದಾವಣಗೆರೆ ಇಂದು 07 ರ ಮಂಗಳವಾರ ಎಐಸಿಸಿ ವೀಕ್ಷಕರಾದ ಪ್ರಣತಿ ಶಿಂಧೆರವರು, ಜಿಲ್ಲಾಧ್ಯಕ್ಷ ಎಚ್.ಬಿ ಮಂಜಪ್ಪನವರ ಉಪಸ್ಥಿತಿಯಲ್ಲಿ ಚನ್ನಗಿರಿ, ಮಾಯಕೊಂಡ ವ್ಯಾಪ್ತಿಯ ವಿಧಾನಸಭಾ ಕ್ಷೇತ್ರದ ಪಕ್ಷದ ಚುನಾಯಿತ ಪ್ರತಿನಿಧಿಗಳು, ವಿಧಾನಸಭಾ ಚುನಾವಣಾ ಆಕಾಂಕ್ಷಿಗಳು, ಪಕ್ಷದ ಎಲ್ಲಾ ಘಟಕಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಮತ್ತು ಮುಖಂಡರ ಸಭೆಯನ್ನು ಬ್ಲಾಕ್ ಅಧ್ಯಕ್ಷರುಗಳ ಅಧ್ಯಕ್ಷತೆಯಲ್ಲಿ ನಡೆಯಲಿವೆ. ಸಭೆಗೆ ಕಡ್ಡಾಯವಾಗಿ ಆಗಮಿಸಲು ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ತಿಳಿಸಿದ್ದಾರೆ.

ಇಂದು ಬೆಳಗ್ಗೆ 11 ಗಂಟೆಗೆ ಚನ್ನಗಿರಿ ವಿಧಾನಸಭಾ ಕ್ಷೇತ್ರದ ಸಭೆ ಚನ್ನಗಿರಿಯ ಪಕ್ಷದ ಕಚೇರಿಯಲ್ಲಿ ನಡೆಯಲಿದೆ. ಮಧ್ಯಾಹ್ನ 12 ಗಂಟೆಗೆ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಸಭೆ ಮಾಯಕೊಂಡದ ಪಕ್ಷದ ಕಚೇರಿಯಲ್ಲಿ ನಡೆಯಲಿದೆ. ಅಂದು ಮಧ್ಯಾಹ್ನ 1:00 ಗಂಟೆಗೆ ಜಗಳೂರು ವಿಧಾನಸಭಾ ಕ್ಷೇತ್ರದ ಸಭೆ ಜಗಳೂರಿನ ಪಕ್ಷದ ಕಚೇರಿಯಲ್ಲಿ ನಡೆಯಲಿದೆ.

# ಹರಪನಹಳ್ಳಿ: ಪೌರ ಕಾರ್ಮಿಕರಿಗೆ 'ದಿನಚರಿ' ಹಂಚಿಕೆ



ಹರಪನಹಳ್ಳಿ, ಫೆ.6- ನಮ್ಮ ನೆನಪುಗಳನ್ನು ಹಾಗೂ ಲೆಕ್ಕ-ಪತ್ರಗಳನ್ನು ಮತ್ತು ಪ್ರವಾಸದ ಮಾಹಿತಿಯನ್ನು ದಾಖಲಿಸಲು ದಿನಚರಿ ಪುಸ್ತಕ ಅಗತ್ಯವಾಗಿವೆ ಎಂದು ಪುರಸಭೆ ಅಧ್ಯಕ್ಷ ಎಚ್.ಎಂ.ಅಶೋಕ ಹೇಳಿದರು.

ಪಟ್ಟಣದ ಪುರಸಭೆ ಕಛೇರಿಯಲ್ಲಿ ಮೊನ್ನೆ ನಡೆದ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮದ ನಿಮಿತ್ತ ಪೌರ ಕಾರ್ಮಿಕರಿಗೆ ದಿನಚರಿ ಪುಸ್ತಕಗಳನ್ನು ಉಚಿತವಾಗಿ ನೀಡಿ, ಅವರು ಮಾತನಾಡಿದರು. ಹಿಂದಿನ ದಿನಮಾನಗಳಲ್ಲಿ ದಿನಚರಿ ಬರೆಯುವ ಅಭ್ಯಾಸ ಇತ್ತು, ಅದನ್ನು ಇಂದಿನ ಯುವ ಸಮೂಹ ಸಾಮಾಜಿಕ ಜಾಲತಾಣ ಬಳಸುತ್ತಿದ್ದು, ಕಥೆ, ಕವನ, ಹಾಡು ಬರೆಯುವ ಹವ್ಯಾಸವನ್ನು ಮರೆತ್ತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯ ಗೌಳಿ ವಿನಯ, ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ, ಹಿರಿಯ ಆರೋಗ್ಯ ಅಧಿಕಾರಿ ಮಂಜುನಾಥ ಸೇರಿದಂತೆ, ಪುರಸಭೆ ಪೌರ ಕಾರ್ಮಿಕರು ಇತರರಿದ್ದರು.

## ಕಂಚಿಕೇರಿಯಲ್ಲಿ ಸಾಮೂಹಿಕ ವಿವಾಹ

ಹರಪನಹಳ್ಳಿ, ಫೆ.6- ತಾಲ್ಲೂಕಿನ ಕಂಚಿಕೇರಿ ಗ್ರಾಮದ ಕೋಡಿ ಸಿದ್ದೇಶ್ವರ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಫೆಬ್ರವರಿ 12ರಂದು ಸಾಮೂಹಿಕ ವಿವಾಹ ಕಾರ್ಯಕ್ರಮ ಜರುಗಲಿದೆ ಎಂದು ಸಂಘಟಕ ಡಾ. ಬಿದ್ರಿ ಕೊಟ್ರೇಶ್ ತಿಳಿಸಿದ್ದಾರೆ.ಲಿಂ. ಬಿದ್ರಿ ರೇವಣಸಿದ್ದಪ್ಪನವರ ನೆನಪಿಗಾಗಿ ಮೀನಾಕ್ಷಮ್ಮ ಪುತ್ರ ಸುನಿಲ್‌ಕುಮಾರ್ ಬಿದ್ರಿ ಹಾಗೂ ಅನುರಾಧ ಕೊಟ್ರೇಶ್ ಅವರು 23ನೇ ವರ್ಷದ ಉಚಿತ ಸಾಮೂಹಿಕ ವಿವಾಹ ನಡೆಸಿಕೊಡಲಿದ್ದಾರೆ ಎಂದು ತಿಳಿಸಿದರು. ಆಸಕ್ತರು ಡಾ.ಬಿದ್ರಿ ಕೊಟ್ರೇಶ್, ಅಶ್ವಿನಿ ಕ್ಲಿನಿಕ್, ಕಂಚಿಕೇರಿ, (94486 54884, 97412 88330, 97412 11440) ಇವರನ್ನು ಸಂಪರ್ಕಿಸಿ ಫೆ. 4ರೊಳಗೆ ಹೆಸರು ನೋಂದಾಯಿಸಬಹುದಾಗಿದೆ

## ಡಾ. ದಿನೇಶ್‌ಗೆ ಬೀಳ್ಕೊಡುಗೆ



ದಾವಣಗೆರೆ, ಫೆ.6- ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಿರಂತರ 14 ವರ್ಷಗಳ ಕಾಲ ಸೇವೆ ಸಲ್ಲಿಸಿದಂತಹ ಡಾ. ಜಿ.ಎಂ. ದಿನೇಶ್‌ರವರ ವರ್ಗಾವಣೆಗೊಂಡ ಪ್ರಯುಕ್ತ ಅರ್ಥಶಾಸ್ತ್ರ ವಿಭಾಗದ ವತಿಯಿಂದ ಬೀಳ್ಕೊಡುಗೆ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಸಮಾರಂಭದಲ್ಲಿ ಅರ್ಥಶಾಸ್ತ್ರ ವೇದಿಕೆಯ ಅಧ್ಯಕ್ಷರಾದ ಪ್ರೊ. ಭೀಮಣ್ಣ ಸುಣಗಾರ್, ಡಾ. ಶಾಂತಕುಮಾರಿ, ಮಂಜುನಾಥ್, ವಸಂತ್, ಡಾ. ಮನೋಹರ್ ಹಾಗೂ ವಿದ್ಯಾರ್ಥಿಗಳಾದ ಸುದೀಪ್. ಎಸ್.ಆರ್. ಭೀಮನಾಯ್ಕ್, ಲೋಹಿತ್, ತಿಪ್ಪೇಶ್ ಭಾಗಿಯಾಗಿದ್ದರು.

LADIES PG BUILDING
FOR RENT
ಸುಸಜ್ಜಿತವಾದ ಮಹಿಳಾ ವಸತಿ ನಿಲಯ ಬಾಡಿಗೆಗಿದೆ.
S.N. Layout Davangere.
Mob.: 95351 14063
96203 71544, 97428 35642

# ಆತ್ಮನಿರ್ಭರದ ಗುರಿಯಲ್ಲಿ ಹೆಚ್.ಎ.ಎಲ್. ಪಯಣ

### ಕಾಂಗ್ರೆಸ್ ಟೀಕೆಗೆ ಪ್ರಧಾನಿ ಮೋದಿ ಉತ್ತರ

ತುಮಕೂರು, ಫೆ. 6 – ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಹೆಚ್.ಎ.ಎಲ್.) ಮುಂದಿಟ್ಟುಕೊಂಡು ತಮ್ಮ ಸರ್ಕಾರದ ವಿರುದ್ಧ ಆರೋಪ ಮಾಡಲಾಗುತ್ತಿತ್ತು. ಆದರೆ, ಈಗ ಅದೇ ಹೆಚ್.ಎ.ಎಲ್. ಆತ್ಮನಿರ್ಭರ ಭಾರತದ ಗುರಿಯೊಂದಿಗೆ ಮುನ್ನಡೆಯುತ್ತಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ತಿಳಿಸಿದರು.

ತುಮಕೂರಿನ ಗುಬ್ಬಿ ತಾಲ್ಲೂಕಿನಲ್ಲಿ ಸ್ಥಾಪಿಸಲಾಗಿರುವ ಹೆಚ್.ಎ.ಎಲ್.ನ ಹೆಲಿಕಾಪ್ಟರ್ ಘಟಕ ಉದ್ಘಾಟಿಸಿ ಅವರು ಮಾತನಾಡಿದರು.

ಇಲ್ಲಿನ ಹೆಲಿಕಾಪ್ಟರ್ ಘಟಕವು ಹೆಚ್.ಎ.ಎಲ್. ವಿರುದ್ಧ ಹೇಳಲಾಗುತ್ತಿದ್ದ ಸುಳ್ಳು ಹಾಗೂ ಅಪಪ್ರಚಾರವನ್ನು ಬಯಲು ಮಾಡಿದೆ ಎಂದು ಮೋದಿ ತಿಳಿಸಿದರು. ಹೆಚ್.ಎ.ಎಲ್. ಕಂಪನಿಯಿಂದ ರಫೇಲ್ ಹೊರಗುತ್ತಿಗೆಯನ್ನು ಕಿತ್ತುಕೊಂಡು ಅನಿಲ್ ಅಂಬಾನಿ ಕಂಪನಿಗೆ ಕೊಡುಗೆಯಾಗಿ ನೀಡಲಾಗಿದೆ ಎಂದು ಕಾಂಗ್ರೆಸ್ ಅಧ್ಯಕ್ಷರಾಗಿದ್ದ ರಾಹುಲ್ ಗಾಂಧಿ ಅವರು 2017-18ರಲ್ಲಿ ಆರೋಪಿಸಿದ್ದರು. ಪರೋಕ್ಷವಾಗಿ ಪ್ರಧಾನಿ ಮೋದಿ ಈ ಟೀಕೆಗೆ ಉತ್ತರಿಸಿದರು.

ಹೆಚ್.ಎ.ಎಲ್. ಮುಂದಿಟ್ಟುಕೊಂಡು ತಮ್ಮ ಸರ್ಕಾರದ ವಿರುದ್ಧ ಆರೋಪಗಳನ್ನು ಮಾಡಲಾಗುತ್ತಿತ್ತು. ಜನರನ್ನು ಪ್ರಚೋದಿಸಲು ಸಂಚುಗಳನ್ನು ನಡೆಸಲಾಗುತ್ತಿತ್ತು. ಆದರೆ, ಈಗ ಹೆಚ್.ಎ.ಎಲ್. ನಮ್ಮ ಆತ್ಮನಿರ್ಭರ ಭಾರತದ ಧ್ಯೇಯದೊಂದಿಗೆ ಮುನ್ನಡೆಯುತ್ತಿದೆ ಎಂದು ಪ್ರಧಾನಿ ಹೇಳಿದರು.

2016ರಲ್ಲಿ ಈ ಘಟಕಕ್ಕೆ ಶಿಲಾನ್ಯಾಸ ನೆರವೇರಿಸಿದ್ದೆ. ಇಂದು ಉದ್ಘಾಟನೆ ಮಾಡಲಾಗುತ್ತಿದೆ. ಇದು ರಕ್ಷಣಾ ಆಮದು ಕಡಿಮೆ ಮಾಡಿಕೊಂಡು ಆತ್ಮನಿರ್ಭರ ಆಗುವ ಭಾರತದ ಬದ್ಧತೆಯನ್ನು ತೋರಿಸುತ್ತದೆ ಎಂದಿದ್ದಾರೆ. ಈಗ ನೂರಾರು ರಕ್ಷಣಾ ಉಪಕರಣಗಳನ್ನು ಭಾರತದಲ್ಲೇ ಉತ್ಪಾದಿಸಲಾಗುತ್ತಿದೆ ಎಂದು ಪ್ರಧಾನಿ ತಿಳಿಸಿದರು.

2014ಕ್ಕೂ ಹಿಂದಿನ 15 ವರ್ಷಗಳಿಗೆ ಹೋಲಿಸಿದರೆ, ಕಳೆದ ಎಂಟು ವರ್ಷಗಳಲ್ಲಿ ಹೆಚ್.ಎ.ಎಲ್.ನಲ್ಲಿ ಮಾಡಲಾಗುತ್ತಿದ್ದ ಹೂಡಿಕೆ ಐದು ಪಟ್ಟು ಹೆಚ್ಚಾಗಿದೆ ಎಂದವರು ಹೇಳಿದರು.

ಇದೇ ವೇಳೆ ಪ್ರಧಾನಿ ಮೋದಿ ಅವರು ತುಮಕೂರು ಇಂಡಸ್ಟ್ರಿಯಲ್ ಟೌನ್‌ಶಿಪ್ ಹಾಗೂ ತಿಪಟೂರಿನ ಜಲ ಜೀವನ್ ಮಿಷನ್ ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಿದರು.

# ಕಟ್ಟಡ ಕಾರ್ಮಿಕರ ಬೋಗಸ್ ಕಾರ್ಡ್ ರದ್ಧತಿ ಅಭಿಯಾನ

ದಾವಣಗೆರೆ, ಫೆ. 6- ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ಬೋಗಸ್ ಕಾರ್ಡ್ ರದ್ಧತಿ ಅಭಿಯಾನವನ್ನು ಇದೇ ಫೆ.25 ರವರೆಗೆ ಹಮ್ಮಿಕೊಳ್ಳಲಾಗಿದೆ. ನಕಲಿ ದಾಖಲೆ ಸೃಷ್ಠಿಸಿ ಮಂಡಳಿಯಲ್ಲಿ ಗುರುತಿನ ಚೀಟಿ ಪಡೆದಿರುವ ಕಟ್ಟಡ ಕಾರ್ಮಿಕರಲ್ಲದ ಫಲಾನುಭವಿಗಳು ತಮ್ಮ ಸ್ವ-ಇಚ್ಛೆಯಿಂದ, ಸಂಬಂಧಿಸಿದ ತಾಲ್ಲೂಕಿನ ಕಾರ್ಮಿಕ ನಿರೀಕ್ಷಕರ ಕಚೇರಿಯಲ್ಲಿ ಹೋಗಿ ಮೂಲ ಗುರುತಿನ ಚೀಟಿಗಳನ್ನು ಹಿಂದಿರುಗಿಸಿ ಸದಸ್ಯತ್ವವನ್ನು ರದ್ದುಪಡಿಸಿಕೊಳ್ಳುವಂತೆ ತಿಳಿಸಲಾಗಿದೆ. ತಪ್ಪಿದ್ದಲ್ಲಿ ಕಾರ್ಮಿಕ ನಿರೀಕ್ಷಕರು ಖುದ್ದು ಸ್ಥಳ ಪರಿಶೀಲನೆ ನಡೆಸಿ, ನಕಲಿ ದಾಖಲೆ ಸೃಷ್ಠಿಸಿ ಗುರುತಿನ ಚೀಟಿ ಪಡೆದ ಹಾಗೂ ಮಂಡಳಿಯಿಂದ ನೀಡುವ ಸೌಲಭ್ಯಗಳನ್ನು ಪಡೆದ ಫಲಾನುಭವಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ಜಿಲ್ಲಾ ಕಾರ್ಮಿಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮುಸ್ಲಿಮರು ಇತರೆ ಸಮಾಜದೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿ : ಸಿ.ಎಂ. ಇಬ್ರಾಹಿಂ



ದಾವಣಗೆರೆ, ಫೆ.6- ಮುಸ್ಲಿಂ ಸಮುದಾಯ ರಾಜಕೀಯ ಕ್ಷೇತ್ರದಲ್ಲಿ ಸೂಕ್ತ ಸ್ಥಾನಮಾನಗಳನ್ನು ಪಡೆಯಲು ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಇತರೆ ಸಮಾಜಗಳ ಜೊತೆಗೆ ಉತ್ತಮ ಬಾಂಧವ್ಯ ಹೊಂದುವ ಮೂಲಕ ಕ್ಷೇತ್ರಗಳಲ್ಲಿ ಜಯ ಸಾಧಿಸಬೇಕಿದೆ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ಸಲಹೆ ನೀಡಿದರು.

ಇಲ್ಲಿನ ಅಖ್ತರ್ ರಜಾ ವೃತ್ತದ ರಿಂಗ್ ರಸ್ತೆಯಲ್ಲಿರುವ ಜೆಡಿಎಸ್ ಪಕ್ಷದ ದಕ್ಷಿಣ ಕ್ಷೇತ್ರದ ಅಭ್ಯರ್ಥಿ ಜೆ.ಅಮಾನುಲ್ಲಾ ಖಾನ್ ನಿವಾಸಕ್ಕೆ ಭೇಟಿ ನೀಡಿದ್ದ ವೇಳೆ ನಡೆದ ಮುಸ್ಲಿಂ ಸಮಾಜ ಬಾಂಧವರ ಸಭೆಯಲ್ಲಿ ಮಾತನಾಡಿದರು.

ನನ್ನ ಮೇಲೆ ನಂಬಿಕೆ, ವಿಶ್ವಾಸವಿಟ್ಟು ಮಾಜಿ ಪ್ರಧಾನಿ ಎಚ್.ದೇವೇಗೌಡರು, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಜೆಡಿಎಸ್ ಪಕ್ಷದ ರಾಜ್ಯಾಧ್ಯಕ್ಷನಾಗಿ ಮಾಡಿದ್ದಾರೆ. ಇದು ನಮ್ಮ ಸಮಾಜದ ಧಾರ್ಮಿಕ ಗುರುಗಳು, ಬುದ್ಧಿಜೀವಿಗಳು, ಚಿಂತಕರು, ಸಮಾನ ಮನಸ್ಕರು, ಸಾಮಾನ್ಯ ಮುಸ್ಲಿಮರು ಇಂದು ತೀರ್ಮಾನ ಮಾಡಬೇಕಾದ ಅನಿವಾರ್ಯತೆ, ಅಗತ್ಯತೆಯೂ ಇದೆ ಎಂದು ಅವರು ವಿವರಿಸಿದರು.

ದಾವಣಗೆರೆ ದಕ್ಷಿಣ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಜೆಡಿಎಸ್‌ಗೆ ಅವಕಾಶ ಮಾಡಿಕೊಡಿ ಎಂದು ಅವರು ಮನವಿ ಮಾಡಿದರು.

ಸಮುದಾಯದ ಧಾರ್ಮಿಕ ಗುರುಗಳ ಸಾನಿಧ್ಯ ವಹಿಸಿದ್ದರು. ಜೆಡಿಎಸ್ ಪಕ್ಷದ ದಕ್ಷಿಣ ಕ್ಷೇತ್ರದ ಅಭ್ಯರ್ಥಿ ಜೆ.ಅಮಾನುಲ್ಲಾ ಖಾನ್, ಪಕ್ಷದ ರಾಜ್ಯ ಕಾರ್ಯದರ್ಶಿ ಟಿ.ಅಸ್ಗರ್, ಮುಖಂಡರಾದ ಶಹನವಾಜ್ ಖಾನ್, ವಕೀಲ ನಜೀರ್ ಅಹಮ್ಮದ್, ಇಂಜಿನಿಯರ್ ಸಮೀರ್, ಶಫೀವುಲ್ಲಾ ಮತ್ತಿತರರು ಇದ್ದರು.

ಹುಟ್ಟುಹಬ್ಬದ ಶುಭಾಶಯಗಳು




ಶುಭ ಕೋರುವವರು : ದಾವಣಗೆರೆ ಮಹಾನಗರ ಪಾಲಿಕೆಯ ಕಾಂಗ್ರೆಸ್ ಸದಸ್ಯರು ಮತ್ತು ಕಾಂಗ್ರೆಸ್ ಮುಖಂಡರು

## ನಗರದಲ್ಲಿ ಹೊಂದಿಸಿ ಬರೆಯಿರಿ ಚಿತ್ರತಂಡದಿಂದ ವಿಭಿನ್ನ ರೀತಿಯ ಪ್ರಚಾರ




ದಾವಣಗೆರೆ, ಫೆ.5- ಇದೇ ದಿನಾಂಕ ಹತ್ತರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿರುವ ಹೊಂದಿಸಿ ಬರೆಯಿರಿ ಚಿತ್ರ ತಂಡ ನಿನ್ನೆ ನಗರಕ್ಕೆ ಭೇಟಿ ನೀಡಿ, ವಿಶಿಷ್ಟ ರೀತಿಯ ಪ್ರಚಾರವನ್ನು ಮಾಡಿತು. ಮನೆ ಮನೆಗಳಿಗೆ ತೆರಳಿ ಅಂಗಡಿ ಮುಂಗಟ್ಟುಗಳಿಗೆ ಭೇಟಿ ನೀಡಿ, ಚಿತ್ರ ಕುರಿತು ಬರೆದ ಪೋಸ್ಟ್ ಕಾರ್ಡ್ ನೀಡುವುದರ ಮೂಲಕ ಚಿತ್ರವನ್ನು ನೋಡಲು ಆತ್ಮೀಯ ಆಮಂತ್ರಣ ಮಾಡಿದರು.

ದಾವಣಗೆರೆಯ ಬಿಡಿಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿರುವ ಚಿತ್ರದ ನಿರ್ದೇಶಕ ರಾಮೇನಹಳ್ಳಿ ಜಗನ್ನಾಥ್, ನಾಯಕ ನಟರಾದ ನವೀನ್ ಶಂಕರ್, ಪ್ರವೀಣ್ ತೇಜ್ ಹಾಗೂ ನಾಯಕಿ ಅರ್ಚನಾ ಜೋಯಿಸ್ ಈ ಪ್ರಚಾರದಲ್ಲಿ ಭಾಗವಹಿಸಿದ್ದರು. ನಂತರ ಹಲವು ಕಾಲೇಜುಗಳಿಗೆ ತೆರಳಿ ಚಿತ್ರ ಕುರಿತು ಪ್ರಚಾರ ಮಾಡಿದರು. ರಾಮೇನಹಳ್ಳಿ ಜಗನ್ನಾಥ್ ವಿದ್ಯಾರ್ಥಿ ಜೀವನದ ಆಪ್ತ ಗೆಳೆಯ ದಾವಣಗೆರೆಯ ಮಹಾನಗರ ಪಾಲಿಕೆಯ ಸದಸ್ಯ ಪ್ರಸನ್ನ ಕುಮಾರ್ ಇವರಿಗೆ ಸಹಕಾರ ನೀಡಿದರು.

# ಯಾರಿಗೇ ಟಿಕೆಟ್ ಸಿಕ್ಕರೂ ಒಗ್ಗಟ್ಟಾಗಿ ಪಕ್ಷದ ಗೆಲುವಿಗಾಗಿ ಶ್ರಮಿಸಿ

### ಕಾಂಗ್ರೆಸ್ ಕಾರ್ಯಕರ್ತರಿಗೆ ಎಐಸಿಸಿ ವೀಕ್ಷಕರಾದ ಪ್ರಣಿತಿ ಶಿಂಧೆ ಕರೆ




ದಾವಣಗೆರೆ, ಫೆ.6- ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ವರಿಷ್ಠರ ತೀರ್ಮಾನದಂತೆ ಪಕ್ಷದ ಯಾವುದೇ ಆಕಾಂಕ್ಷಿಗಳಿಗೆ ಟಿಕೆಟ್ ನೀಡಿದರೂ ಒಗ್ಗಟ್ಟಾಗಿ ಪಕ್ಷದ ಗೆಲುವಿಗಾಗಿ ಕಾರ್ಯಕರ್ತರು ತಮ್ಮ ಶ್ರಮವನ್ನು ಪ್ರದರ್ಶಿಸಬೇಕಿದೆ ಎಂದು ಎಐಸಿಸಿ ವೀಕ್ಷಕರಾದ ಪ್ರಣಿತಿ ಶಿಂಧೆ ಕರೆ ನೀಡಿದರು.

ಅವರು, ಇಂದು ನಗರದ ನಿಜಲಿಂಗಪ್ಪ ಬಡಾವಣೆಯಲ್ಲಿ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ದಾವಣಗೆರೆ ಉತ್ತರ ಕ್ಷೇತ್ರದ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಮಾತನಾಡಿದರು.

ಪಕ್ಷದ ವರಿಷ್ಠರಾದ ರಾಹುಲ್ ಗಾಂಧಿ ಭಾರತ್ ಜೋಡೋ ಯಾತ್ರೆಯಲ್ಲಿ ತಮ್ಮ ಪಾತ್ರ ನಿಭಾಯಿಸಿದ್ದಾರೆ. ಭಾರತ್ ಜೋಡೋ ಯಾತ್ರೆ ಬಳಿಕ ಕರ್ನಾಟಕದಲ್ಲಿ ಚುನಾವಣೆ ಬರುತ್ತಿದ್ದು, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸದಾವಕಾಶವಿದೆ. ಜಿಲ್ಲೆಯ 8 ಕ್ಷೇತ್ರಗಳಲ್ಲೂ ನಮ್ಮ ಪಕ್ಷದ ಶಾಸಕರಾಗಲು ಶ್ರಮ ಹಾಕಬೇಕಿದೆ ಎಂದು ಕಾರ್ಯಕರ್ತರಿಗೆ ತಿಳಿಸಿದರು.

ವಿಪಕ್ಷ ನಾಯಕರಾದ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಸುರ್ಜೇವಾಲಾ, ಡಾ. ಶಾಮನೂರು ಶಿವಶಂಕರಪ್ಪ ಸೇರಿದಂತೆ, ಹಿರಿಯ ನಾಯಕರ ಶಕ್ತಿ ಪಕ್ಷಕ್ಕಿದೆ. ಈ ಎಲ್ಲರ ಮಾರ್ಗದರ್ಶನದಲ್ಲಿ ವಿಧಾನಸಭೆ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಪಕ್ಷದ ಕಾರ್ಯಕರ್ತರು ಒಗ್ಗಟ್ಟಾಗಿ ಕೆಲಸ ಮಾಡಬೇಕು. ಪಕ್ಷ ವಿರೋಧಿ ಚಟುವಟಿಕೆಗಳು ಕಂಡುಬಂದರೆ ಅಂತವರ ಬಗ್ಗೆ ಎಐಸಿಸಿಗೆ ವರದಿ ನೀಡುವುದಾಗಿ ಎಚ್ಚರಿಕೆ ನೀಡಿದರು.

ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವೀಕ್ಷಕಿಯಾಗಿ ನನ್ನನ್ನು ಆಯ್ಕೆ ಮಾಡಲಾಗಿದ್ದು, ಮುಖಂಡರ ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಲಾಗದಿದ್ದರೆ, ವೈಯಕ್ತಿಕವಾಗಿ ಸಂಪರ್ಕಿಸಿ ಮಾಹಿತಿ ನೀಡಬಹುದು. ಪಕ್ಷದ ಪರ ಕೆಲಸ ಮಾಡದಿರುವವರ ಬಗ್ಗೆಯೂ ತಿಳಿಸಬಹುದು ಎಂದರು.

ಪಕ್ಷದ ಜಿಲ್ಲಾಧ್ಯಕ್ಷ ಹೆಚ್.ಬಿ. ಮಂಜಪ್ಪ ಮಾತನಾಡಿ, ಕಳೆದ ವಿಧಾನಸಭೆ ಚುನಾವಣೆಯಲ್ಲಿ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರನ್ನು ಸೋಲಿಸಿದ ಬಗ್ಗೆ ದಾವಣಗೆರೆ ಉತ್ತರ ಕ್ಷೇತ್ರದ ಮತದಾರರು ಪಶ್ಚಾತ್ತಾಪಪಟ್ಟಿದ್ದಾರೆ. ಜಿಲ್ಲೆಯ ವಿವಿಧ ಕ್ಷೇತ್ರಗಳಲ್ಲಿ ಅಧಿಕೃತ ಅಭ್ಯರ್ಥಿ ಪರವಾಗಿ ಕಾರ್ಯಕರ್ತರು ಕೆಲಸ ಮಾಡಬೇಕು. ಪ್ರತಿ ಮನೆಗೂ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಸರ್ಕಾರದ ಅವಧಿಯ ಕೆಲಸಗಳನ್ನು ಮನವರಿಕೆ ಮಾಡಿಕೊಡಬೇಕು ಎಂದರು.

ದಾವಣಗೆರೆ ಉತ್ತರ ಕ್ಷೇತ್ರದ ಅಧ್ಯಕ್ಷ ಕೆ.ಜಿ. ಶಿವಕುಮಾರ್ ಮಾತನಾಡಿ, ಉತ್ತರ ಕ್ಷೇತ್ರದ 14 ವಿಭಾಗಗಳಲ್ಲಿ ಪಕ್ಷದ ಯೋಜನೆಗಳನ್ನು ತಲುಪಿಸಲಾಗುವುದು ಎಂದರು.

ಸಭೆಯಲ್ಲಿ ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ದಕ್ಷಿಣ ವಲಯದ ಅಧ್ಯಕ್ಷ ಅಯ್ಯೂಬ್ ಪೈಲ್ವಾನ್, ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ ಶೆಟ್ಟಿ, ಪಾಲಿಕೆ ವಿಪಕ್ಷ ನಾಯಕ ಗಡಿಗುಡಾಳ್ ಮಂಜುನಾಥ್, ಮುಖಂಡ ಸೈಯದ್ ಸೈಫುಲ್ಲಾ, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಅನಿತಾಬಾಯಿ ಮಾಲತೇಶ್, ಎಸ್. ಮಲ್ಲಿಕಾರ್ಜುನ್ ಸೇರಿದಂತೆ ಇತರರು ಇದ್ದರು.

# ಟರ್ಕಿ, ಸಿರಿಯಾಗಳಲ್ಲಿ ಭೀಕರ ಭೂಕಂಪ

### 2300ಕ್ಕೂ ಹೆಚ್ಚು ಸಾವು



ಅಂಕಾರ, ಫೆ. 6 - ಟರ್ಕಿ ಹಾಗೂ ಸಿರಿಯಾಗಳಲ್ಲಿ 7.8 ತೀವ್ರತೆಯ ಭೀಕರ ಭೂಕಂಪ ಸಂಭವಿಸಿದ್ದು, 2,300ಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದಾರೆ ಹಾಗೂ ಸಾವಿರಾರು ಜನ ಗಾಯಗೊಂಡಿದ್ದಾರೆ. ನೂರಾರು ಕಟ್ಟಡಗಳು ಕುಸಿದಿದ್ದು, ಅವಶೇಷಗಳಡಿ ಜನ ಸಿಲುಕಿಕೊಂಡಿದ್ದಾರೆ.

ಅವಶೇಷಗಳಡಿ ಸಿಲುಕಿದ ಜನರನ್ನು ರಕ್ಷಿಸಲು ಕಾರ್ಯಾಚರಣೆ ನಡೆಸಲಾಗುತ್ತಿದೆ. ಮೃತರ ಸಂಖ್ಯೆ ಇನ್ನಷ್ಟು ಹೆಚ್ಚಾಗಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೋಮವಾರ ಮುಂಜಾನೆಯ ವೇಳೆ ತೀವ್ರ ಭೂಕಂಪ ಸಂಭವಿಸಿತು. ನಂತರದಲ್ಲಿ ಹಲವಾರು ಪಶ್ಚಾತ್ ಕಂಪನಗಳು ಸಂಭವಿಸಿದವು. ಅದರಲ್ಲಿ ಒಂದು ಮೊದಲ ಭೂಕಂಪದಷ್ಟೇ ತೀವ್ರವಾಗಿತ್ತು.

ಟರ್ಕಿಯ ಕಹ್ರಮನ್ಮರಸ್ ಎಂಬಲ್ಲಿ ಭೂಕಂಪ ಕೇಂದ್ರೀಕೃತವಾಗಿತ್ತು. ಕೈರೋ ಹಾಗೂ ಬ್ಯೂರತ್‌ವರೆಗೂ ನೆಲ ನಡುಗಿದ ಅನುಭವವಾಗಿದೆ.

ಸಿರಿಯಾದಲ್ಲಿ ಸರ್ಕಾರ ಹಾಗೂ ವಿರೋಧಿಗಳ ವಶದಲ್ಲಿರುವ ಪ್ರದೇಶಗಳ ನಡುವೆ ಭೂಕಂಪದ ತೀವ್ರತೆ ಹೆಚ್ಚಾಗಿದೆ. ಈ ಪ್ರದೇಶವನ್ನು ರಷ್ಯಾ ಬೆಂಬಲಿತ ಸರ್ಕಾರಿ ಪಡೆಗಳು ಸುತ್ತುವರೆದಿವೆ.

ಈ ಪ್ರದೇಶದಲ್ಲಿ ನೂರಾರು ಜನರು ಅವಶೇಷಗಳಡಿ ಸಿಲುಕಿದ್ದಾರೆ. ಈ ಪ್ರದೇಶದಲ್ಲಿ ಯುದ್ಧದಿಂದ ಸ್ಥಳಾಂತರವಾದ 40 ಲಕ್ಷಕ್ಕೂ ಹೆಚ್ಚು ಜನರು ನೆಲೆಸಿದ್ದಾರೆ. ಯುದ್ಧಪೀಡಿತ ಈ ಪ್ರದೇಶದಲ್ಲಿ ಮೊದಲೇ ಜನರು ಸಂಕಷ್ಟದಲ್ಲಿದ್ದರು.

ಟರ್ಕಿ ಭೂಕಂಪ ಪೀಡಿತ ವಲಯದಲ್ಲಿದೆ. ಈ ಹಿಂದೆ 1999ರಲ್ಲಿ ಸಂಭವಿಸಿದ ಇದೇ ರೀತಿಯ ಭೂಕಂಪದಲ್ಲಿ 18 ಸಾವಿರ ಜನ ಮೃತಪಟ್ಟಿದ್ದರು.

ಸೋಮವಾರ ಸಂಭವಿಸಿದ ಭೂಕಂಪ ರಿಕ್ಟರ್ ಮಾಪಕದಲ್ಲಿ 7.8ರಷ್ಟಿತ್ತು. ನಂತರ ಸಂಭವಿಸಿದ ಪಶ್ಚಾತ್ ಕಂಪನವೊಂದು 7.5ರ ತೀವ್ರತೆ ಹೊಂದಿತ್ತು.


ಸಿರಿಯಾದ ಅಲೆಪ್ಪೋ ಹಾಗೂ ಹಮಾ ನಗರಗಳಿಂದ ಹಿಡಿದು ಟರ್ಕಿಯ ಡಿಯರ್ಬಕಿರ್ ನಡುವಿನ ಹಲವಾರು ನಗರಗಳಲ್ಲಿನ ಸಾವಿರಾರು ಕಟ್ಟಡಗಳು ಕುಸಿದಿವೆ. ಈ ಪ್ರದೇಶದಲ್ಲಿ ತೀವ್ರ ಚಳಿ ಇದೆ. ಹೀಗಾಗಿ ಅವಶೇಷಗಳಡಿ ಸಿಲುಕಿದವರ ಜೀವಕ್ಕೆ ಇನ್ನಷ್ಟು ಅಪಾಯ ಎದುರಾಗಿದೆ.

# ವಾಲ್ಮೀಕಿ ಜಾತ್ರೆಯಲ್ಲಿ ಉದ್ಯೋಗ ಮೇಳ

ಹರಪನಹಳ್ಳಿ, ಫೆ.6 - ಹರಿಹರ ತಾಲ್ಲೂಕು, ರಾಜನಹಳ್ಳಿಯ ಶ್ರೀ ವಾಲ್ಮೀಕಿ ಗುರುಪೀಠದಲ್ಲಿ ಫೆ.8 ಮತ್ತು 9 ರಂದು ಜರುಗುವ ವಾಲ್ಮೀಕಿ ಜಾತ್ರೆಗೆ ತಾಲ್ಲೂಕಿನ ವಾಲ್ಮೀಕಿ ನಾಯಕ ಸಮಾಜದ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ವಾಲ್ಮೀಕಿ ನಾಯಕ ಸಮಾಜದ ತಾಲ್ಲೂಕು ಅಧ್ಯಕ್ಷ ಕೆ.ಉಚ್ಚೆಂಗೆಪ್ಪ ಹಾಗೂ ಜಾತ್ರಾ ಸಮಿತಿ ಅಧ್ಯಕ್ಷ ವೈ.ಡಿ.ಅಣ್ಣಪ್ಪ ತಿಳಿಸಿದ್ದಾರೆ.

ಫೆ.8ರಂದು ನಡೆಯುವ ಜಾತ್ರೆಯಲ್ಲಿ ವಾಲ್ಮೀಕಿ ಗುರುಪೀಠ ಟ್ರಸ್ಟ್ ಹಾಗೂ ಎಂ. ಆರ್.ಎನ್.ನಿರಾಣಿ ಫೌಂಡೇಷನ್ ಇವರ ಸಹಯೋಗದಲ್ಲಿ ಉದ್ಯೋಗ ಮೇಳವನ್ನು ಆಯೋಜಿಸಲಾಗಿದ್ದು, ಈ ಉದ್ಯೋಗ ಮೇಳದಲ್ಲಿ 40 ರಿಂದ 50ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿದ್ದು ನಿರುದ್ಯೋಗಿ ಯುವಕ, ಯುವತಿಯರು ಎಸ್ಸೆಸ್ಸೆಲ್ಸಿ ಅಂಕಪಟ್ಟಿ ಹಾಗೂ ವಿದ್ಯಾರ್ಹತೆಯ ಅಗತ್ಯ ದಾಖಲೆಗಳ ಜೆರಾಕ್ಸ್ ಪ್ರತಿಗಳೊಂದಿಗೆ ಹಾಜರಾಗಬೇಕು ಹಾಗೂ ಜಾತ್ರೆಯ ಕಾರ್ಯಕ್ರಮದಲ್ಲಿ ತಾವೆಲ್ಲರೂ ಭಾಗವಹಿಸುವ ಜೊತೆಗೆ ತಮ್ಮ ಸ್ವಂತ ವಾಹನಗಳಲ್ಲಿ ಬಂದು ಜಾತ್ರೆಯನ್ನು ಯಶಸ್ವಿಗೊಳಿಸಬೇಕು ಎಂದು ಕೋರಿದ್ದಾರೆ.

# ಹೈಡ್ರೋಜನ್ ಇಂಧನದಿಂದ ಆರ್ಥಿಕತೆ ವೃದ್ಧಿ



ಬೆಂಗಳೂರು, ಫೆ. 6 – ನವೀಕರಣ ಇಂಧನ, ಜೈವಿಕ ಇಂಧನ ಹಾಗೂ ಹೈಡ್ರೋಜನ್ ಉತ್ಪಾದನೆಗೆ ಒತ್ತು ಕೊಡುವ ಮೂಲಕ ಭಾರತವನ್ನು ವಿಶ್ವದ ಮೂರನೇ ಅತಿ ದೊಡ್ಡ ಆರ್ಥಿಕತೆ ಮಾಡಬಹುದು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ತಿಳಿಸಿದರು.

ತೈಲ ಹಾಗೂ ಅನಿಲ ವಲಯದ ಮುಂಚೂಣಿ ನಾಯಕರನ್ನು ಭೇಟಿ ಮಾಡಿದ ಪ್ರಧಾನಿ ಮೋದಿ, ಭಾರತವನ್ನು ಸುಸ್ಥಿರ ಬೆಳವಣಿಗೆಯ ದಾರಿಗೆ ತರುವ ಮಾರ್ಗಗಳ ಕುರಿತು ಚರ್ಚಿಸಿದರು. ಇಂಧನ ಸಪ್ತಾಹದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ವೇಳೆ ಪ್ರಧಾನಿ ಮೋದಿ ಅವರು ಉದ್ಯಮದ ನಾಯಕರ ಜೊತೆ ಚರ್ಚೆ ನಡೆಸಿದರು. ಭಾರತ ಪ್ರಸಕ್ತ ವಿಶ್ವದ ಐದನೇ ಅತಿ ದೊಡ್ಡ ಆರ್ಥಿಕತೆಯಾಗಿದೆ.

# ರಾಷ್ಟ್ರಮಟ್ಟದ ಕರಾಟೆ ಸ್ಪರ್ಧೆಯಲ್ಲಿ ನಿಧಿ ಬೇತೂರ್‌ಗೆ 2 ಚಿನ್ನದ ಪದಕ



ದಾವಣಗೆರೆ, ಫೆ. 6- ಈಚೆಗೆ ಮೈಸೂರಿನಲ್ಲಿ ಆಯೋಜಿಸಿದ್ದ ರಾಷ್ಟ್ರಮಟ್ಟದ ಮೈಸೂರು ಓಪನ್ ಕರಾಟೆ ಚಾಂಪಿಯನ್ ಶಿಪ್ ಸ್ಪರ್ಧೆಯ 9 ವರ್ಷ ಮೇಲ್ಪಟ್ಟ ವಿಭಾಗದಲ್ಲಿ ನಗರದ ನಿಧಿ ಬೇತೂರು ಸ್ಪರ್ಧಿಸಿ ಕಟಾ ಹಾಗೂ ಕುಮಿಟೆ ವಿಭಾಗಗಳಲ್ಲಿ ತಲಾ ಒಂದು ಚಿನ್ನದ ಪದಕ ಪಡೆದಿದ್ದಾಳೆ.

ಕೆ.ಪಿ.ಜೋಸ್ ಅವರಿಂದ ತರಬೇತಿ ಪಡೆದಿರುವ ನಿಧಿ ನಗರದ ಅಭಿಷೇಕ್ ಬೇತೂರು ಹಾಗೂ ಶ್ರೀಮತಿ ಶ್ವೇತಾ ದಂಪತಿ ಪುತ್ರಿ.


**ಬೇಕಾಗಿದ್ದಾರೆ**

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ

**ಶಾಂತಲಾ** ದಿ ವೆಡ್ಡಿಂಗ್ ಮಾಲ್....
ಚಾಮರಾಜ ಪೇಟೆ, ದಾವಣಗೆರೆ. 9686195327


## ವಡೆಯರಹಳ್ಳಿಯಲ್ಲಿ ಇಂದು ದೇವಸ್ಥಾನ ಲೋಕಾರ್ಪಣೆ



ದಾವಣಗೆರೆ ತಾಲ್ಲೂಕು ವಡೆಯರಹಳ್ಳಿಯ ಪುರಾತನ ಶ್ರೀ ಕೆಂಡೇಶ್ವರ ಸ್ವಾಮಿಯ ರಾಜಗೋಪುರದ ಲೋಕಾರ್ಪಣೆ ಮತ್ತು ಶಿಖರ ಕಳಸಾರೋಹಣ ಮತ್ತು ದೇವಸ್ಥಾನ ಲೋಕಾರ್ಪಣೆ ಸಮಾರಂಭ ಇಂದು ಬೆಳಿಗ್ಗೆ 10 ಕ್ಕೆ ನಡೆಯಲಿದೆ.

ಇಂದು ಪ್ರಾತಃಕಾಲ ಶ್ರೀ ಕೆಂಡೇಶ್ವರ ಸ್ವಾಮಿಗೆ ಮುತ್ತೈದೆಯರಿಂದ ಕುಂಭಾಭಿಷೇಕ, ಬಿಲ್ವಾರ್ಚನೆ ಗ್ರಾಮದ ಎಲ್ಲಾ ದೇವರಿಗೆ ಅಭಿಷೇಕ ಮತ್ತು ಅಲಂಕಾರ ಪೂಜೆ ಮತ್ತು ಶ್ರೀ ಚೌಡೇಶ್ವರಿ ದೇವಿಗೆ ಅಭಿಷೇಕ ಮತ್ತು ಅಲಂಕಾರ ಮತ್ತು ಮುತ್ತೈದೆಯರಿಂದ ಉಡಿ ತುಂಬುವ ಕಾರ್ಯಕ್ರಮ ಹಾಗೂ ನೈವೇದ್ಯ ಮತ್ತು ಮಹಾಮಂಗಳಾರತಿ ನಡೆಯುವುದು. ನಂತರ ನಡೆಯುವ ಧರ್ಮ ಸಭೆಯು ರಾಮಘಟ್ಟದ ಶ್ರೀ ರೇವಣಸಿದ್ದೇಶ್ವರ ಮಹಾಸ್ವಾಮೀಜಿ ಹಾಗೂ ಶಿಕಾರಿಪುರ ತಾಲ್ಲೂಕು ತೊಗರ್ಸಿಯ ಶ್ರೀ ಮಹಾಂತ ದೇಶೀಕೇಂದ್ರ ಸ್ವಾಮೀಜಿಗಳವರು ದಿವ್ಯಸಾನ್ನಿಧ್ಯದಲ್ಲಿ ನಡೆಯಲಿದೆ.

ಕೋಣಂದೂರಿನ ಶ್ರೀ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ಅವರ ನೇತೃತ್ವದಲ್ಲಿ ಹಾಗೂ ಶ್ರೀ ಗುರುಬಸವ ದೇವರ ಸಂಸ್ಥಾನ ಮಠ ಖೇದರಿಪುರ (ಕ್ಯಾಸನೂರು) ಇವರ ಸಮ್ಮುಖದಲ್ಲಿ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಕೊಡಗನೂರು ಗ್ರಾ.ಪಂ. ಅಧ್ಯಕ್ಷ ಎಸ್. ಸಿದ್ದಪ್ಪ ಆಗಮಿಸುವರು. ವಿಶೇಷ ಆಹ್ವಾನಿತರಾಗಿ ಗ್ರಾ.ಪಂ. ಆಡಳಿತಾಧಿಕಾರಿಗಳು ಹಾಗೂ ಮಾಜಿ ಮತ್ತು ಹಾಲಿ ಸರ್ವ ಸದಸ್ಯರುಗಳು ಆಗಮಿಸುವರು. ಕಾರ್ಯಕ್ರಮದಲ್ಲಿ ಎ.ಓ. ರವಿ ಪ್ರಾಸ್ತಾವಿಕ ನುಡಿಯಾಡುವರು. ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಎಂ.ಬಿ. ನಾಗರಾಜ್ ಕಾಕನೂರು ನಿರೂಪಿಸುವರು. ಹೆಚ್.ಕೆ. ದೇವರಾಜ್ ಸ್ವಾಗತ ಭಾಷಣ ಮಾಡುವರು. ಎ.ಎಂ. ಶಿವಪ್ರಕಾಶ್ ವಂದನಾರ್ಪಣೆ ಸಲ್ಲಿಸುವರು.

## ಆವರಗೊಳ್ಳದಲ್ಲಿ ಇಂದು ಸರ್ಪಾರೋಹಣ

ಆವರಗೊಳ್ಳ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ಮಹಾಸ್ವಾಮಿ ರಥೋತ್ಸವವು ಪ್ರಯುಕ್ತ ಇಂದು ದಿನಾಂಕ 7 ರ ಮಂಗಳವಾರ ರಾತ್ರಿ 9 ಗಂಟೆಗೆ ಸರ್ಪಾರೋಹಣ ಉತ್ಸವ ನಡೆಯಲಿದೆ.

**18ನೇ ವರ್ಷದ ಚಿರಸ್ಮರಣೆ**



**ದಿ|| ಎಂ.ಕೆ. ಕಮಲಮ್ಮನವರು**

(ದಿ|| ಎಂ. ಕನ್ನಪ್ಪನವರ ಧರ್ಮಪತ್ನಿ)

ನಂದಾದೀಪದ ಹಾಗೆ ನಮ್ಮ ಮನೆ, ಮನಗಳನ್ನು ಬೆಳಗಿದ ನೀವು ನಮ್ಮನ್ನಗಲಿ ಇಂದಿಗೆ 18 ವರ್ಷಗಳಾದವು. ವಾತ್ಸಲ್ಯಮಯಿ ತಾಯಿಯಾಗಿ ಎಲ್ಲರ ಅಕ್ಕರೆಗೂ ಪಾತ್ರರಾಗಿದ್ದ ನೀವು ನಿತ್ಯ ಸ್ಮರಣೀಯರಾಗಿದ್ದೀರಿ.

ಮಗ : ಎಂ.ಕೆ. ಮಲ್ಲಿಕಾರ್ಜುನ ಮತ್ತು ಕುಟುಂಬದವರು ಹಾಗೂ ಬಂಧು-ಮಿತ್ರರು, ದಾವಣಗೆರೆ.

## ವಿಕ್ಟೋರಿಯ ಗೌರಿ ನೇಮಕದ ವಿಚಾರಣೆ ನಡೆಸಲಿರುವ ಕೋರ್ಟ್

ನವದೆಹಲಿ, ಫೆ. 6 – ವಕೀಲೆ ಲಕ್ಷ್ಮಣ ಚಂದ್ರ ವಿಕ್ಟೋರಿಯ ಗೌರಿ ಅವರನ್ನು ಮದ್ರಾಸ್ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಿಸಿರುವುದನ್ನು ಪ್ರಶ್ನಿಸಿ ದಾಖಲಾಗಿರುವ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ನಿರ್ಧರಿಸಿದೆ.

ಗೌರಿ ಅವರ ನೇಮಕದ ಬಗ್ಗೆ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಅವರು ಪ್ರಮಾಣ ವಚನ ಸ್ವೀಕರಿಸದಂತೆ ತಡೆಯಬೇಕು ಎಂದು ಅರ್ಜಿ ದಾಖಲಿಸಲಾಗಿದೆ. ನಾಳೆ ಮಂಗಳವಾರದಂದು ಈ ಬಗ್ಗೆ ವಿಚಾರಣೆ ನಡೆಯಲಿದೆ.

ನ್ಯಾಯಮೂರ್ತಿಯಾಗಿ ಗೌರಿ ಪ್ರಮಾಣ ವಚನ ಸ್ವೀಕರಿಸದಂತೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ಹೊರಡಿಸಿದೆ. ಗೌರಿ ಅವರು ಈ ಹಿಂದೆ ಮುಸ್ಲಿಮರು ಹಾಗೂ ಕ್ರಿಶ್ಚಿಯನ್ನರ ವಿರುದ್ಧ ದ್ವೇಷ ಭಾಷಣ ಮಾಡಿದ್ದಾರೆ ಎಂದು ಸುಪ್ರೀಂ ಕೋರ್ಟ್ ಎದುರು ಆರೋಪಿಸಲಾಗಿದೆ.


ನಂಜಪ್ಪ ಲೈಫ್ ಕೇರ್ | ಕ್ಯಾನ್ಸರ್ ಸ್ಕ್ರೀನಿಂಗ್ ಪ್ಯಾಕೇಜ್ | ನಂಜಪ್ಪ ಹಾಸ್ಪಿಟಲ್ಸ್ ದಾವಣಗೆರೆ

ಆರಂಭಿಕ ಹಂತದಲ್ಲಿ ಪತ್ತೆಮಾಡಿದರೆ ಕ್ಯಾನ್ಸರ್ ಗುಣಪಡಿಸುವ ಸಾಧ್ಯತೆ ಹೆಚ್ಚು
ಕ್ಯಾನ್ಸರ್‌ನ ಎಚ್ಚರಿಕೆಯ ಸಂಕೇತಗಳನ್ನು ನಿರ್ಲಕ್ಷಿಸಬೇಡಿ

•ನಿರಂತರ ಕೆಮ್ಮು •ಧ್ವನಿಯ ಬದಲಾವಣೆ •ನುಂಗಲು ಕಷ್ಟವಾಗುವುದು
•ರಕ್ತಸ್ರಾವ •ಹೊಟ್ಟೆಯಲ್ಲ ವಿಪರೀತ ನೋವು •ಸ್ತನ / ಕಂಕುಳಲ್ಲ ಗಡ್ಡೆ
•ಕ್ಯಾನ್ಸರ್‌ನ ಕುಟುಂಬದ ಇತಿಹಾಸ •ಸಂಭೋಗದ ನಂತರ ರಕ್ತ ಸ್ರಾವವಾಗುವುದು

ಮಹಿಳೆಯರಿಗೆ
• ಮ್ಯಾಮೊಗ್ರಫಿ/ ಸೋನೋ ಮ್ಯಾಮೊಗ್ರಫಿ
• ಪ್ಯಾಪ್ ಸ್ಮೀಯರ್
• ಹೊಟ್ಟೆ ಮತ್ತು ಪೆಲ್ವಿಸ್‌ನ ಅಲ್ಟ್ರಾಸೌಂಡ್ ಸ್ಕ್ಯಾನ್
• ಎದೆಯ ಎಕ್ಸ್-ರೇ
• ಕ್ಯಾನ್ಸರ್ ತಜ್ಞರೊಂದಿಗೆ ಸಮಾಲೋಚನೆ
~~₹4000/-~~ ₹2000/-

ಪುರುಷರಿಗೆ
• ಎದೆಯ ಎಕ್ಸ್-ರೇ
• ಪಿಎಸ್‌ಎ
• ಹೊಟ್ಟೆ ಮತ್ತು ಪೆಲ್ವಿಸ್‌ನ ಅಲ್ಟ್ರಾಸೌಂಡ್ ಸ್ಕ್ಯಾನ್
• ಕ್ಯಾನ್ಸರ್ ತಜ್ಞರೊಂದಿಗೆ ಸಮಾಲೋಚನೆ
~~₹2000/-~~ ₹1250/-

ಗಮನಿಸಿ: ರೋಗದ ಸೂಚನೆ ಇದ್ದಲ್ಲಿ ಅಗತ್ಯ ಪರೀಕ್ಷೆಗಳ ಮೇಲೆ 10% ರಿಂದ 20% ರಷ್ಟು ರಿಯಾಯಿತಿ
ಈ ಕೊಡುಗೆ ಫೆಬ್ರವರಿ 28ರ ವರೆಗೆ ಮಾತ್ರ | ಫೆಬ್ರವರಿ 4 – ವಿಶ್ವ ಕ್ಯಾನ್ಸರ್ ದಿನದ ಪ್ರಯುಕ್ತ

ಗಾಡಿಕೊಪ್ಪ, ಸಾಗರ ರಸ್ತೆ, ಶಿವಮೊಗ್ಗ 08182-267300, 251166, 251234 | ಶಾಮನೂರು ಬಸಪ್ಪ ರಸ್ತೆ (ಹದಡಿ ರಸ್ತೆ) ತರಳಬಾಳು ಲೇಔಟ್, ದಾವಣಗೆರೆ 08192-260111/260222, 7022260111


|| ಶ್ರೀ ವೀರಭದ್ರೇಶ್ವರ ಪ್ರಸನ್ನ ||



# ಕೈಲಾಸ ಶಿವಗಣಾರಾಧನೆ ಆಹ್ವಾನ





ದಾವಣಗೆರೆ ಜಿ|| ಹರಿಹರ ತಾ|| ಹನಗವಾಡಿ ಗ್ರಾಮದ ವಾಸಿ

**ಎಸ್.ಎಂ. ವೀರೇಶ್ ಮತ್ತು ಸಹೋದರರು**

ಜಿಲ್ಲಾಧ್ಯಕ್ಷರು, ಭಾರತೀಯ ಜನತಾ ಪಾರ್ಟಿ, ದಾವಣಗೆರೆ ಹಾಗೂ ಮಾಜಿ ಅಧ್ಯಕ್ಷರು, ಜಿ.ಪಂ. ದಾವಣಗೆರೆ.

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 30.01.2023ನೇ ಸೋಮವಾರ ಬೆಳಿಗ್ಗೆ 9.15ಕ್ಕೆ ನನ್ನ ಪೂಜ್ಯ ತಾಯಿಯವರಾದ

**ಶ್ರೀಮತಿ ಸಣ್ಣಲಿಂಗಪ್ಪರ ಚಂದಮ್ಮ**

ಇವರು ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**‘ಕೈಲಾಸ ಶಿವಗಣಾರಾಧನೆ’ಯನ್ನು**

ದಿನಾಂಕ : 07.02.2023ನೇ ಮಂಗಳವಾರ ಬೆಳಗ್ಗೆ 11.00ಕ್ಕೆ ಹನಗವಾಡಿ ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖ ತಪ್ತರು :

ಶ್ರೀ ಸಣ್ಣಲಿಂಗಪ್ಪರ ಉಮಾಪತಿ ಮತ್ತು ಮಕ್ಕಳು, ಅಳಿಯಂದಿರು
ಶ್ರೀ ಸಣ್ಣಲಿಂಗಪ್ಪರ ಮಹೇಶ್ವರಪ್ಪ ಮತ್ತು ಮಕ್ಕಳು, ಸೊಸೆಯಂದಿರು
ಶ್ರೀಮತಿ ರೂಪಾ ಶ್ರೀ ಎಸ್.ಎಂ. ವೀರೇಶ್ ಮತ್ತು ಮಕ್ಕಳು
ಶ್ರೀಮತಿ ಗಾಯತ್ರಿ ಜ್ಯೋತಿ ಪ್ರಕಾಶ್ ಮತ್ತು ಮಕ್ಕಳು
ಶ್ರೀಮತಿ ಪುಷ್ಪ ಶ್ರೀ ಎಸ್.ಎಂ. ರೇವಣಸಿದ್ದಪ್ಪ, ಉಪಾಧ್ಯಕ್ಷರು, ಗ್ರಾಮ ಪಂಚಾಯಿತಿ, ಹನಗವಾಡಿ. ಮತ್ತು ಮಕ್ಕಳು,
ಶ್ರೀಮತಿ ಮಮತಾ ಶ್ರೀ ಎಸ್.ಎಂ. ಹಾಲಸ್ವಾಮಿ ಮತ್ತು ಮಕ್ಕಳು
ಶ್ರೀಮತಿ ಜ್ಯೋತಿ ಶ್ರೀ ಪ್ರಶಾಂತಿ ಮತ್ತು ಮಕ್ಕಳು
ಸಣ್ಣಲಿಂಗಪ್ಪರ ವಂಶಸ್ಥರು, ದೊಡ್ಡಮನೆ ವಂಶಸ್ಥರು, ಹನಗವಾಡಿ ಹಾಗೂ ಬಂಧುಗಳು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte